# ಪಂಚಾಯತಿ ರಾಜ್ ವ್ಯವಸ್ಥೆಯಲ್ಲಿ ಜಿಯೋಸ್ಪೇಷಿಯಲ್ ತಂತ್ರಾಂಶಗಳ ಬಳಕೆ

ನವೆಂಬರ್ -2017



ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ
ಭಾರತೀಯ ವಿಜ್ಞಾನ ಮಂದಿರದ ಆವರಣ, ಬೆಂಗಳೂರು-560012

# ನೈಸರ್ಗಿಕ ಸಂಪನ್ಮೂಲಗಳ ಮಾಹಿತಿ ನಿರ್ವಹಣಾ ವ್ಯವಸ್ಥೆ

## ಪಂಚಾಯತಿ ರಾಜ್ ವ್ಯವಸ್ಥೆಯಲ್ಲಿ ಜಿಯೋಸ್ಪೇಷಿಯಲ್ ತಂತ್ರಾಂಶಗಳ ಬಳಕೆ - ನವೆಂಬರ್ 2017


ಪ್ರಧಾನ ವಿಚಾರಕ

**ಶ್ರೀ ಹೆಚ್ ಹೇಮಂತ ಕುಮಾರ್**

ಪ್ರಧಾನ ವೈಜ್ಞಾನಿಕ ಅಧಿಕಾರಿ



KSCST

**ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ**

ಭಾರತೀಯ ವಿಜ್ಞಾನ ಮಂದಿರದ ಆವರಣ, ಬೆಂಗಳೂರು-560012

| ಜಿಲ್ಲಾ ಎನ್.ಆರ್.ಡಿ.ಎಂ.ಎಸ್. ಕೇಂದ್ರ - ತಾಂತ್ರಿಕ ಅಧಿಕಾರಿಗಳು | | | |
|---|---|---|---|
| **ಹೆಸರು** | **ಜಿಲ್ಲೆ** | **ಹೆಸರು** | **ಜಿಲ್ಲೆ** |
| ಮಂಜುನಾಥ ಎಸ್ ತೋಟದ | ಬೆಳಗಾವಿ | ವಿಕ್ರಮ್ ಆರ್ | ಉಡುಪಿ |
| ಚಂದ್ರಶೇಖರ ಕೆ ಗುಂದ | ಬಾಗಲಕೋಟ | ಬಸವರಾಜ್ ಬಾರ್ಕಿ | ಚಿಕ್ಕಮಗಳೂರು |
| ಮಹೇಶ್ ರೆಡ್ಡಿ | ಬೀದರ | ಭರತ್ ಕುಮಾರ್ ವಿ ಹೆಚ್ | ತುಮಕೂರು |
| ಮೊಹಮ್ಮದ್ ಫಾರೂಕ್ ಅಲಿ | ರಾಯಚೂರ | ಪ್ರದೀಪ್ ಕುಮಾರ ಬಿ ಎಂ | ಮಂಡ್ಯ |
| ಗುರುಸ್ವಾಮಿ ಪಿ | ಕೊಪ್ಪಳ | ಮಮತಾ ಕೆ ಎಸ್ | ದಕ್ಷಿಣ ಕನ್ನಡ |
| ಓಂಕಾರ ಕೋರಿ | ಗದಗ | ಕಿರಣ ರಾಜ್ ಕೆ | ಕೊಡಗು |
| ಪ್ರತಿಭಾ ವಿ ಹುಬ್ಬಳ್ಳಿ | ಧಾರವಾಡ | ವಿನೋದ ಎಂ | ಮೈಸೂರು |
| ರಾಮಚಂದ್ರ ರೆಡ್ಡಿ ಜಿ ಬಿ | ಬಳ್ಳಾರಿ | ಕಾರ್ತಿಕ್ ಎಂ ಎಸ್ | ಚಾಮರಾಜನಗರ |
| ಆನಂದ್ ಕಬ್ಬುರ್ | ಚಿತ್ರದುರ್ಗ | ಭೀಮಶೆನ್ ಯಲ್ ಕುಲ್ಕರ್ಣಿ | ಕಲಬುರ್ಗಿ |
| ಗಂಗಾಧರಪ್ಪ ಆರ್ | ದಾವಣಗೆರೆ | ಸಿದ್ಧ ರೆಡ್ಡಿ | ಯಾದಗಿರಿ |
| ಶಂಕರ ಪಿ | ಶಿವಮೊಗ್ಗ | ನಿರಂಜನ್ ಕುಮಾರ ಆರ್ | ಕೋಲಾರ |
| ಪ್ರದೀಪ್ ವಿ ಹೆಗ್ಡೆ | ಹಾವೇರಿ | ಮಂಜುಳ ಆರ್ ಚಂದಗೋಲ | ಚಿಕ್ಕಬಳ್ಳಾಪುರ |
| ಅಕ್ಷಯ್ ಡಿ | ರಾಮನಗರ | ಕೇತನ್ ಕುಮಾರ ಪಿ | ವಿಜಯಪುರ |

# ನೈಸರ್ಗಿಕ ಸಂಪನ್ಮೂಲಗಳ ಮಾಹಿತಿ ನಿರ್ವಹಣಾ ವ್ಯವಸ್ಥೆ

| ಹಿರಿಯ ಅಧಿಕಾರಿಗಳು - ಎನ್.ಆರ್.ಡಿ.ಎಂ.ಎಸ್. ಕೇಂದ್ರ | |
|---|---|
| ರಮೇಶ್ ಡಿ ಆರ್/ಗಣೇಶ್ ವಿ | ಬೆಂಗಳೂರು ಗ್ರಾಮಾಂತರ |
| ಪಾಲನೇತ್ರ ಹೆಚ್ ಆರ್ | ಹಾಸನ |
| ಶಿವಕುಮಾರ ಕೆ ವಿ | ಬೆಂಗಳೂರು ನಗರ |
| ಅನಿಲ ಆರ್ ನಾಯಕ | ಉತ್ತರ ಕನ್ನಡ |

| ರಾಜ್ಯ ಎನ್.ಆರ್.ಡಿ.ಎಂ.ಎಸ್. ಕೇಂದ್ರ |
|---|
| ಸ್ಮಿತಾ ಎಂ ಜೆ |
| ಅನುಷಾ ಹೆಚ್ ಸಿ |
| ಡಾ ಬಿನ್ನಿ ಗೋಪಾಲ್ |

# ವಿಷಯಗಳು


| ಕ್ರ.ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| 1. | ಕೃಷಿಪತ್ತಿನ  ಸಹಕಾರ  ಸಂಘಗಳ ಮತ್ತು ವಿಸ್ತಾರದ ಶಾಖೆಗಳ ಮಾಹಿತಿಯ ಜಿ. ಐ. ಎಸ್ ನಕ್ಷೆ | **1** |
| 2. | ಜಲಸಿರಿಯ ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡುವ ಕುರಿತು | **5** |
| 3. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ ಇಲಾಖೆಯಲ್ಲಿ ಜಿ.ಐ.ಎಸ್ ನ ಉಪಯೋಗಗಳು | **8** |
| 4. | ಭೂ ಮಾಪನ ಕಂದಾಯ ವ್ಯವಸ್ಥೆ ಯಲ್ಲಿ ಜಿ.ಐ.ಎಸ್ ನ ಉಪಯೋಗಗಳು | **11** |
| 5. | ನೂತನವಾಗಿ ಸ್ಥಾಪಿತವಾಗಲಿರುವ ಅಜ್ಜಂಪುರ ಹೊಸ ತಾಲ್ಲೂಕಿನ ಜಿ.ಐ.ಎಸ್ ಮಾದರಿ ನಕ್ಷೆ | **13** |
| 6. | ಪಶುಪಾಲನಾ ಮತ್ತು ವೈದ್ಯಕೀಯ ಸೇವಾ ಇಲಾಖೆಗೆ ಜಿ.ಐ.ಎಸ್ ನ ಉಪಯೋಗಗಳು | **16** |
| 7. | ಅಂತರ್ಜಲ ನಿರ್ದೇಶನಾಲಯ ಇಲಾಖೆಗೆ ಜಿ.ಐ.ಎಸ್ ನ ಉಪಯೋಗಗಳು | **18** |
| 8. | ಪ್ರವಾಹ ಮೌಲ್ಯಮಾಪನದಲ್ಲಿ  ಜಿ.ಐ.ಎಸ್ ತಂತ್ರಜ್ಞಾನ ಬಳಕೆ | **20** |
| 9. | ಹಿಂದುಳಿದ ಗ್ರಾಮಗಳನ್ನು ಆಯ್ಕೆ ಮಾಡುವ ಬಗ್ಗೆ | **22** |
| 10. | ನೀರಿನ ಶುದ್ಧಿಕರಣ ಘಟಕಗಳ ನಿರ್ಮಾಣದಲ್ಲಿ ಜಿ.ಐ.ಎಸ್  ತಂತ್ರಜ್ಞಾನ | **25** |
| 11. | ಸಮಾಜ ಕಲ್ಯಾಣ ಇಲಾಖೆಗೆ  ಜಿ.ಐ.ಎಸ್ ನ ಉಪಯೋಗಗಳು | **27** |
| 12. | ಓ ಡಿ ಹೆಫ್ ಯೋಜನೆಗೆ ಜಿ.ಐ.ಎಸ್ ನ ಉಪಯೋಗಗಳು | **29** |
| 13. | ಕಾಲೋಚಿತ ನೀರಿನ ಮಟ್ಟ ಏರಿಳಿತದ ಅಧ್ಯಯನಕ್ಕೆ ಜಿ.ಐ.ಎಸ್ ತಂತ್ರಜ್ಞಾನದ ಬಳಕೆ | **31** |
| 14. | ಹಕ್ಕು ಪತ್ರಗಳನ್ನು ವಿತರಿಸುವಲ್ಲಿ ಜಿ.ಐ.ಎಸ್ ನ ಉಪಯೋಗಗಳು | **35** |
| 15. | ಕಾಡ್ಗಿಚ್ಚು ನಿಯಂತ್ರಣ ಯೋಜನೆ ರೂಪಿಸುವಲ್ಲಿ e ಜಿ.ಐ.ಎಸ್ ತಂತ್ರಾಂಶದ ಬಳಕೆ | **37** |
| 16. | ಮಾನವ-ಕಾಡಾನೆ ಸಂಘರ್ಷ ನಿಯಂತ್ರಣ ಕಾರ್ಯತಂತ್ರದಲ್ಲಿ ಜಿ.ಐ.ಎಸ್ ತಂತ್ರಾಂಶದ ಬಳಕೆ | **40** |
| 17. | ತಾಲ್ಲೂಕುಗಳ ಹೋಬಳಿ ಸರಹದ್ದುಗಳನ್ನೊಳಗೊಂಡ ಜಿ.ಐ.ಎಸ್ ನಕಾಶೆ | **43** |

| | | |
|---|---|---|
| 18. | ಮೊಬೈಲ್ ಕವರೇಜ್ ನಕ್ಷೀಕರಣದಲ್ಲಿ ಜಿಐಎಸ್ ಪಾತ್ರ | **46** |
| 19. | ಜಿಲ್ಲಾ ಮಟ್ಟದ ಸ್ಥಳೀಯ/ದೇಶೀಯ ದನಗಳ ತಳಿವಾರು ನಕ್ಷೀಕರಣದಲ್ಲಿ ಜಿ.ಐ.ಎಸ್ ಪಾತ್ರ | **49** |
| 20. | ಪಶುಸಂಗೋಪಣೆ ಮತ್ತು ಪಶುವೈದ್ಯ ಇಲಾಖೆಯಲ್ಲಿ ಜಿ.ಐ.ಎಸ್ ತಂತ್ರಾಂಶದ ಬಳಕೆ | **52** |
| 21. | ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರ ಕಾರ್ಯಾಲಯಕ್ಕೆ ಜಿ.ಐ.ಎಸ್ ನಕಾಶೆ | **54** |
| 22. | ಮೀನುಗಾರಿಕೆ ಇಲಾಖೆಯಲ್ಲಿ ಜಿ.ಐ.ಎಸ್. ತಂತ್ರಾಂಶದ ಬಳಕೆ | **56** |
| 23. | ಕೃಷಿ ಕೇಂದ್ರಕ್ಕೆ ಸಂಬಂಧಿಸಿದಂತೆ ಐ.ಸಿ.ಎ.ಆರ್ ಕಾರ್ಯಕ್ರಮಗಳು ನಡೆದಿರುವಂತಹ ಗ್ರಾಮಗಳ ನಕಾಶೆ | **58** |
| 24. | ಭಾರಿ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹ ಕೃತಕ ನಿರ್ಮಿತ ಕಾಲುವೆಗಳು ಮಾಹಿತಿ ನಕಾಶೆ | **60** |
| 25. | ಪಶುಸಂಗೋಪನಾ ಇಲಾಖೆಯಲ್ಲಿ ಜಿ.ಐ.ಎಸ್. ತಂತ್ರಾಂಶದ ಬಳಕೆ | **62** |
| 26. | ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಜಿ.ಐ.ಎಸ್. ತಂತ್ರಾಂಶದ ಬಳಕೆ | **63** |
| 27. | ಕೋಲಾರ ಜಿಲ್ಲೆಯ ಅಧ್ಯಯನ ಕೊಳವೆಬಾವಿಗಳಿಗೆ ಸಂಬಂಧಿಸಿದಂತೆ ಜಿ.ಐ.ಎಸ್ ತಂತ್ರಜ್ಞಾನ ಬಳಕೆ | **65** |
| 28. | ಪ್ರವಾಸೋದ್ಯಮದಲ್ಲಿ ಜಿ.ಐ.ಎಸ್ ತಂತ್ರಜ್ಞಾನ | **67** |
| 29. | ಕುಡಿಯುವ ನೀರು ಯೋಜನೆಯಲ್ಲಿ ಜಿ.ಐ.ಎಸ್ ಪಾತ್ರ | **69** |
| 30. | ವಿಷನ್-2025 ಕಾರ್ಯಗಾರದಲ್ಲಿ ಜಿ.ಐ. ಎಸ್ | **71** |
| 31. | ಬಹು ಹಳ್ಳಿಗಳ ಕುಡಿಯುವ ನೀರು ಪೂರೈಸುವ ಯೋಜನೆ | **75** |

## ಕೃಷಿಪತ್ತಿನ ಸಹಕಾರ ಸಂಘಗಳ ಮತ್ತು ವಿಸ್ತಾರದ ಶಾಖೆಗಳ ಮಾಹಿತಿಯ ಜಿ. ಐ. ಎಸ್ ನಕ್ಷೆ

**ವಿಕ್ರಮ್ ಆರ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಉಡುಪಿ**

**ಅಗತ್ಯತೆ**

ಉಡುಪಿ ಜಿಲ್ಲೆಯ ಸಹಕಾರ ಸಂಘಗಳ ನೋಂದಣಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಬಹುಮುಖ್ಯವಾದ ಕೃಷಿ ಪತ್ತಿನ ಸಹಕಾರ ಸಂಘಗಳ ಗ್ರಾಮಗಳ ಮಾಹಿತಿಯೊಂದಿಗೆ ಮತ್ತು ಅದರ ವಿಸ್ತಾರದ ವ್ಯಾಪ್ತಿಗೆ ಬರುವ ಶಾಖೆ ಗಳನ್ನೊಳಗೊಂಡ ಗ್ರಾಮಗಳ ಮಾಹಿತಿಯನ್ನು ಜಿ. ಐ. ಎಸ್ ತಂತ್ರಾಂಶದೊಂದಿಗೆ ನಕ್ಷೆಯನ್ನು ಜಿಲ್ಲಾ NRDMS ಶಾಖೆಯ ಮೂಲಕ ತಯಾರಿಸಲು ಕೋರಿತುತ್ತಾರೆ.

**ಉದ್ದೇಶ**

ರಾಜ್ಯ ಸರಕಾರದ ಉದ್ದೇಶದ ಅನ್ವಯ ಜಿಲ್ಲೆಯ ಪ್ರತಿ ಗ್ರಾಮವು ಕೃಷಿಪತ್ತಿನ ಸಹಕಾರ ಸಂಘಗಳನ್ನು ಹೊಂದಿರಲು ಯೋಜನೆಯನ್ನು ರೂಪಿಸಲಾಗಿರುತ್ತದೆ. ಇದರ ಪ್ರಕಾರ ಈಗಿರುವ ಕೃಷಿಪತ್ತಿನ ಸಹಕಾರಗಳ ಸಂಘದ ಗ್ರಾಮವಾರು ಮಾಹಿತಿಯೊಂದಿಗೆ ನಕ್ಷೆಯ ಮೂಲಕ ಪ್ರಸ್ತುತ ಸ್ಥಿತಿಗತಿಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವ ಉದ್ದೇಶದಿಂದ ನಕ್ಷೆ ತಯಾರಿಸಲು ಪ್ರೇರೇಪಿಸಿರುತ್ತದೆ.

**ವಿಧಾನ**

ಜಿಲ್ಲಾ ಸಹಕಾರ ಸಂಘಗಳ ನೋಂದಣಾಧಿಕಾರಿಯವರ ಇಲಾಖೆಯಿಂದ ಕೃಷಿಪತ್ತಿನ ಸಹಕಾರ ಸಂಘಗಳ ಮತ್ತು ಅದರ ವಿಸ್ತಾರದ ಶಾಖೆಗಳ ಗ್ರಾಮವಾರು ಮಾಹಿತಿಯನ್ನು ಪಡೆಯಲಾಗಿರುತ್ತದೆ. ನಂತರ ಜಿಲ್ಲಾ NRDMS ಶಾಖೆಯಲ್ಲಿ ಲಭ್ಯವಿರುವ ಗ್ರಾಮವಾರು ಜಿ.ಐ.ಎಸ್ ಮಾಹಿತಿಯೊಂದಿಗೆ ಡಿಜಿಟೈಝೇಷನ್ ಪ್ರಕ್ರಿಯೆಯೊಂದಿಗೆ ದಾಖಲೆಗಳ ಮಾಹಿತಿಯನ್ನು ಕ್ರೂಡೀಕರಿಸಿ ಜಿ.ಐ.ಎಸ್ ಅಪ್ಲಿಕೇಶನ್ (ಸಾಫ್ಟ್ ವೆರ್) ನೊಂದಿಗೆ ನಮೂದಿಸಲಾಗಿರುತ್ತದೆ. ನಂತರ ತಾಲೂಕಾವಾರು ನಕ್ಷೆಯನ್ನು ತಯಾರಿಸಲಾಗಿರುತ್ತದೆ.

**ಉಪಯುಕ್ತತೆ**

- ಪ್ರತಿ ಗ್ರಾಮವು ಕೃಷಿಪತ್ತಿನ ಸಹಕಾರ ಸಂಘಗಳನ್ನು ಒಳಗೊಂಡಿರುವಂತೆ ನಕ್ಷೆಗಳ ಮೂಲಕ ಸ್ಥಿತಿಗತಿಗಳನ್ನು ಅರಿಯಲು ಉಪಯುಕ್ತವಾಗಿರುತ್ತದೆ.
- ಇತ್ತೀಚಿಗೆ ರಾಜ್ಯ ಸರಕಾರದಿಂದ ಘೋಷಣೆಯಾದ ರೈತರ ಸಾಲ ಮನ್ನಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಕ್ಷೆಯು ಉಪಯುಕ್ತವಾಗಿರುತ್ತದೆ.
- ನ್ಯಾಯ ಬೆಲೆ ಅಂಗಡಿಗೆ ಸಂಬಂಧಿಸಿದಂತೆ ಅವುಗಳ ಸ್ಥಳಗಳನ್ನು ಮತ್ತು ಮಾರಾಟ ಕೇಂದ್ರಗಳ ಸಂಪರ್ಕ ಒದಗಿಸಲು (ಲಿಂಕಿಂಗ್ ಪ್ರಕ್ರಿಯೆಗೆ) ನಕ್ಷೆಯು ಸಹಾಯವಾಗುತ್ತದೆ.



ಕರ್ನಾಟಕ
ಉಡುಪಿ ಜಿಲ್ಲೆ
ಕಾರ್ಕಳ ತಾಲೂಕಿನ ಕೃಷಿಪತ್ತಿನ ಸಹಕಾರ ಸಂಘ ಗಳಿಗೆ
ಒಳಪಡುವ ಶಾಖೆ ಗಳ ಮಾಹಿತಿಯ ಜಿ. ಐ. ಎಸ್ ನಕ್ಷೆ
ಸೂಚ್ಯಂಕ / LEGEND
- ತಾಲೂಕು ಸರಹದ್ದು
( Taluk Boundary )
- ಗ್ರಾಮ ಸರಹದ್ದು
( Village Boundary )
C - ( ಕೃಷಿ ಪತ್ತಿನ ಸಹಕಾರ ಸಂಘಗಳ ಶಾಖೆ )
- ರಾಷ್ಟ್ರೀಯ ಹೆದ್ದಾರಿ
- National Highway
- ರಾಜ್ಯ ಹೆದ್ದಾರಿ
- State Highway
- ಇತರ ರಸ್ತೆ
- Other Roads
N
W
E
S
ಉಡುಪಿ ತಾಲೂಕು
ಶೃಂಗೇರಿ ತಾಲೂಕು
ಮೂಡಿಗೆರೆ ತಾಲೂಕು
ಬೆಳ್ತಂಗಡಿ ತಾಲೂಕು
ಮಂಗಳೂರು ತಾಲೂಕು
BELENJE
KUCHCHUR
CHARA
C_Hebri
HEBRI
KEREBETTU
C_Hebri
NADPALU
MUDRADY
C_Varanga
SHIVAPURA
C_Hebri
C_Varanga
KABBINALE
PADUKUDOOR
C_Varanga
VARANGA
YELLARE
C_Marne_Ajekar
KADTHALA
KUKKUJE
ANDARU
MARNE
NEERE
YERLAPADY
SHIRLAL
KANAJARU
HERMUNDE
C_Kukkundoor
HIRGANA
C_Neere_Bailore
BAILOOR
JARKALA
C_Mala
KERVASHE
NINJOOR
KOWDOOR
C_Neere_Bailore
C_Kukkundoor
KUKKUNDOOR
C_Neere_Bailore
DURGA
C_Durga
KARKALA(TMC)
C_Mala
MUDAR
C_Mala
MALA
KALLYA
C_Sooda
C_Sooda
SOODA
C_Bola
NITTE
C_Sooda
NANDALIKE
MIYAR
KEDINJE
SANOOR
C_Sanoor
NALLUR
NOORALBETTU
BELMAN
C_Sooda
RENJALA
C_Bola
BOLA
IRVATHURU
KANTHAVARA
EEDU
C_Mundkuru
INNA
MULLADKA
C_Mundkuru
MUNDKURU
C_Mundkuru
0
4
8
16 Kilometers
Prepared by : District NRDMS, Zilla Panchayath, Rajatadri, Manipal, Udupi
NRDMS
THE SPATIAL SUPPORT FOR LOCAL LEVEL PLANNING
KSCST
74°50'0"E
75°0'0"E
75°10'0"E
75°20'0"E


ಕರ್ನಾಟಕ
ಉಡುಪಿ ಜಿಲ್ಲೆ
ಉಡುಪಿ ಜಿಲ್ಲೆಯಲ್ಲಿ ಸ್ಥಾಪಿತವಾದ ಕೃಷಿಪತ್ತಿನ ಸಹಕಾರ ಸಂಘಗಳ ನಕ್ಷೆ
ಭಟ್ಕಳ
ಸಾಗರ ತಾಲೂಕು
ಹೊಸನಗರ ತಾಲೂಕು
ತೀರ್ಥಹಳ್ಳಿ ತಾಲೂಕು
ಶೃಂಗೇರಿ ತಾಲೂಕು
ಮೂಡಿಗೆರೆ ತಾಲೂಕು
ಬೆಳ್ತಂಗಡಿ ತಾಲೂಕು
ಮಂಗಳೂರು ತಾಲೂಕು
ಅರಬ್ಬೀ ಸಮುದ್ರ
ಅರಬ್ಬೀ ಸಮುದ್ರ
ಅರಬ್ಬೀ ಸಮುದ್ರ
ಸೆಂಟ್ ಮೇರಿಸ್ ದ್ವೀಪ
N
W
E
S
Index / ಸೂಚ್ಯಂಕ
- District Boundary ( ಜಿಲ್ಲಾ ಸರಹದ್ದು )
- Taluk Boundary ( ತಾಲೂಕು ಸರಹದ್ದು )
- Village Boundary ( ಗ್ರಾಮ ಸರಹದ್ದು )
- Agriculture Society ( ಕೃಷಿ ಪತ್ತಿನ ಸಹಕಾರಿ ಸಂಘ ) (ಒಳಗೊಂಡ ಗ್ರಾಮ ಗಳು)
0 4.5 9 18 Kilometers
74°40'0"E
74°50'0"E
75°0'0"E
75°10'0"E
14°0'0"N
13°50'0"N
13°40'0"N
13°30'0"N
13°20'0"N
13°10'0"N
NRDMS
THE SPATIAL SUPPORT FOR LOCAL LEVEL PLANNING
KSCST
Prepared by :
District NRDMS Center,
Zilla Panchayath, Rajatadri,
Manipal, Udupi




## ಜಲಸಿರಿಯ ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡುವ ಕುರಿತು

**ವಿಕ್ರಮ್ ಆರ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಉಡುಪಿ**

**ಅಗತ್ಯತೆ**

ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿಯವರ ಸಮ್ಮುಖದಲ್ಲಿ ನಡೆಸಿದ ಚರ್ಚೆಯಲ್ಲಿ ಉಡುಪಿ ಜಿಲ್ಲೆಯ ನಗರ ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ಜಲಸಿರಿ ( KIUWMIP) ಯೋಜನೆಯ ಕುರಿತು ಗ್ರಾಮಗಳ ಸಮೀಕ್ಷೆಯ ಕುರಿತು ಜಿ. ಐ. ಎಸ್ ನಕ್ಷೆಯನ್ನು ಜಿಲ್ಲಾ NRDMS ಮೂಲಕ ಒದಗಿಸಲು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಮಾಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿಯವರು ಜಿಲ್ಲಾ ಶಾಖೆಗೆ GIS ನಕ್ಷೆ ತಯಾರಿಸಿ ಕೊಡಲು ಸೂಚಿಸಿರುತ್ತಾರೆ.

**ಉದ್ದೇಶ**

ಇತ್ತೀಚಿನ ದಿನಗಳಲ್ಲಿ ಉಡುಪಿ ನಗರ ಪ್ರದೇಶದಲ್ಲಿ ನೀರಿನ ಅಭಾವ ಬಹು ಮುಖ್ಯ ಸಮಸ್ಯೆಯಾಗಿರುತ್ತದೆ. ಪ್ರಯುಕ್ತ ಸಮಸ್ಯೆಯನ್ನು ಪರಿಹರಿಸಲು ಯೋಜನೆಯನ್ನು ರೂಪಿಸಲಾಗಿರುತ್ತದೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜಲ ಸಿರಿ ( KIUWMIP – KUIDFC ) ಯೋಜನೆಯ ಬಹು ಮುಖ್ಯ ಉದ್ದೇಶವೆಂದರೆ ಉಡುಪಿ ಜಿಲ್ಲೆಯ ನಗರ (CMC) ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ಕುರಿತು ವಾರಾಹಿ ನದಿಯ ಉಪಯೋಗದೊಂದಿಗೆ ಹಾಲಾಡಿ ಗ್ರಾಮದಿಂದ ಬಜೆ ಅಣೆಕಟ್ಟು ( ಕುಕ್ಕೆಹಳ್ಳಿ )ಗೆ ನೀರು ಪೂರೈಸಲು ಮತ್ತು ಇದರ ಸಹಾಯದೊಂದಿಗೆ ಉಡುಪಿ ನಗರಕ್ಕೆ ನೀರನ್ನು ಒದಗಿಸಲು ಯೋಜನೆಯನ್ನು ರೂಪಿಸಲಾಗಿರುತ್ತದೆ. ಇದಕ್ಕೆ ಸಂಬಂಧ ಪಟ್ಟಂತೆ ಯೋಜನೆಯಡಿಯಲ್ಲಿ ಬರುವ ಗ್ರಾಮಗಳ ಹಾಗು ಜಲಸಂಪನ್ಮೂಲಗಳ ಮಾಹಿತಿಯೊಂದಿಗೆ GIS ನಕ್ಷೆಯ ಅಗತ್ಯತೆ ಇರುತ್ತದೆ. ಸುಪ್ರೀಂ ಕೋರ್ಟ್ ಆದೇಶದಂತೆ ಯೋಜನೆಗನುಗುಣವಾಗಿ ಗ್ರಾಮಗಳ ಜನ ಸಂಖ್ಯೆಗೆ ಅನುಗುಣವಾಗಿ ನೀರು ಸರಬರಾಜು ಅಥವಾ ನೀರು ಪೂರೈಕೆಗಾಗಿ ಕೊಳವೆಗಳ ಮೂಲಕ ಹಾದು ಹೋಗುವ ಗ್ರಾಮಗಳಿಗೂ ಸಹ ನೀರು ಪೂರೈಸಲು ಸೂಚಿಸಿರುತ್ತಾರೆ. ಇದರ ಆಧಾರದ ಮೇರೆಗೆ ಗ್ರಾಮಗಳ ಸಮೀಕ್ಷೆಯ ಕುರಿತು ಹಾಗು ಜಲ ಸಂಪನ್ಮೂಲಗಳ GIS ನಕ್ಷೆಯೊಂದಿಗೆ ಯೋಜನೆ ರೂಪಿಸಲು ಸಹಾಯವಾಗುವ ಉದ್ದೇಶದಿಂದ ನಕ್ಷೆಯ ಬೇಡಿಕೆ ಇಟ್ಟಿರುತ್ತಾರೆ ಮತ್ತು ಯೋಜನೆಯ ರೂಪುರೇಷುಗಳ ಕುರಿತು ಮಾಹಿತಿಯನ್ನು ಪಡೆಯಲು ಮತ್ತು ಅಕ್ಕ ಪಕ್ಕದ (Identification of Adjacent village) ಗ್ರಾಮಗಳನ್ನೂ ಗುರುತಿಸುವ ಸಲುವಾಗಿ ಮತ್ತು ಅಗತ್ಯತೆಗೆ ಅನುಗುಣವಾಗಿ ನೀರು ಒದಗಿಸಲು GIS ನಕ್ಷೆಯ ಉದ್ದೇಶವಾಗಿರುತ್ತದೆ.

**ವಿಧಾನ**

ಜಲ ಸಿರಿ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾ NRDMS ಶಾಖೆಯಲ್ಲಿ ಲಭ್ಯವಿರುವ ಗ್ರಾಮಗಳ ಯೋಜನೆಗೆ ಸಂಬಂಧಿಸಿದಂತೆ ವಾರಾಹಿ ನದಿಯ ಹಾಲಾಡಿ ಗ್ರಾಮದಿಂದ ಬಜೆ ಆಣೆಕಟ್ಟು (ಕುಕ್ಕೆಹಳ್ಳಿ ಗ್ರಾಮ) ದವರೆಗೂ ಹಾದು ಹೋಗುವ ( ನೀರು ಪೂರೈಕೆಯ ಕೊಳವೆಯ) ಗ್ರಾಮಗಳ ಮಾಹಿತಿ (Enroute Villages), ಬಜೆ ಯಿಂದ ಮಣಿಪಾಲಕ್ಕೆ ಹಾದು ಹೋಗುವ ಪೈಪ್ ಲೈನ್ ಗಳ ಗ್ರಾಮಗಳ ಮಾಹಿತಿ ಮತ್ತು ಬಹು ಮುಖ್ಯ ವಾಗಿ ನೀರಿನ ಬೇಡಿಕೆ ಇರುವ ಉಡುಪಿ ನಗರದ ಒಳಪಡುವ ಗ್ರಾಮಗಳ ಮಾಹಿತಿಯನ್ನು ಸಂಬಂಧ ಪಟ್ಟ ಇಲಾಖೆ ಯಿಂದ ಪಡೆಯಲಾಗಿರುತ್ತದೆ. ಇದರ ಅನ್ವಯ ಹಾಲಾಡಿಯಿಂದ ಬಜೆ ವರೆಗೂ ನೀರಿನ ಕೊಳವೆ ಹಾದು ಹೋಗುವ ಗ್ರಾಮ (Enroute Villages Considered for Varahi Scheme) ಗಳ ಸಂಖ್ಯೆ ೧೨ ಮತ್ತು ಬಜೆ ಅಣೆಕಟ್ಟುವಿನಿಂದ ಉಡುಪಿ ನಗರ ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ಕೊಳವೆ ಹಾದು ಹೋಗುವ ಗ್ರಾಮಗಳ ಸಂಖ್ಯೆ - ೫

ಆಗಿರುತ್ತದೆ. ಈ ಎಲ್ಲಾ ಮಾಹಿತಿಯನ್ನು ಜಿಲ್ಲಾ NRDMS ಕೇಂದ್ರದಲ್ಲಿ ಲಭ್ಯವಿರುವ ಗ್ರಾಮಗಳ ಮಾಹಿತಿಯೊಂದಿಗೆ GIS ಸಾಫ್ಟ್ ವೆರ್ ಉಪಯೋಗದೊಂದಿಗೆ ಮತ್ತು ಜಲಸಂಪನ್ಮೂಲ ಗಳ ಮಾಹಿತಿಯನ್ನು ಕ್ರೂಡೀಕರಿಸಿ ಗ್ರಾಮಗಳ ಮಾಹಿತಿಯ ಆಧಾರದ ಡಿಜಿಟೈಸೇಷನ್ ಪ್ರಕ್ರಿಯೆಯೊಂದಿಗೆ GIS ನಕ್ಷೆಯನ್ನು ತಯಾರಿಸಲಾಗಿರುತ್ತದೆ.

**ನಕ್ಷೆಯ ಉಪಯುಕ್ತತೆಗಳು**

- ಪೈಪ್ ಲೈನ್ ಹಾದು ಹೋಗುವ (Enroute Villages )ಗ್ರಾಮ ಗಳಿಗೆ ನೀರು ಸರಬರಾಜು ಮಾಡಲು ಯೋಜನೆ ರೂಪಿಸಲು ಸಹಾಯವಾಗುತ್ತದೆ.
- ನಕ್ಷೆಯ ಅನುಗುಣವಾಗಿ ಯೋಜನೆಯಡಿಯಲ್ಲಿ ಬರುವ ಗ್ರಾಮ ಗಳ ಸಮೀಪದ ಮತ್ತು ಅಕ್ಕ ಪಕ್ಕದ ( To identify Adjacent Villages ) ಗ್ರಾಮ ಗಳನ್ನೂ ಗುರುತಿಸುವ ಸಲುವಾಗಿ ಗ್ರಾಮ ಗಳಿಗೂ ಮುಂದಿನ ದಿನಗಳಲ್ಲಿ ನೀರು ಪೂರೈಸಲು ಯೋಜನೆ ರೂಪಿಸಲು ಉಪಯುಕ್ತವಾಗಿರುತ್ತದೆ.
- ನಕ್ಷೆಯಲ್ಲಿ ಸೂಚಿಸಿರುವ ಜಲ ಸಂಪನ್ಮೂಲ ಮಾಹಿತಿಯನ್ನು ಒಳಗೊಂಡು ಜಿಲ್ಲೆಯಾದ್ಯಂತ ಇನ್ನು ಹಲವು ರೀತಿಯ ವಿವಿಧ ಗ್ರಾಮಗಳಿಗೂ ನೀರು ಸರಬರಾಜು ಮಾಡುವ ಕುರಿತು ಯೋಜನೆಯನ್ನು ರೂಪಿಸಲು ಅನುಕೂಲವಾಗುತ್ತದೆ.



ಕರ್ನಾಟಕ
ಉಡುಪಿ ಜಿಲ್ಲೆ
ಉಡುಪಿ ಜಿಲ್ಲೆಯ ನಗರ (CMC) ಪ್ರದೇಶಗಳಿಗೆ ವಾರಾಹಿ ನದಿಯಿಂದ ನೀರು
ಸರಬರಾಜು ಮಾಡುವ ಯೋಜನೆಯ ಕುರಿತು ಒಳಪಡುವ ಗ್ರಾಮಗಳ ನಕ್ಷೆ
74°40'0"E
74°50'0"E
75°0'0"E
75°10'0"E
14°0'0"N
N
S
E
W
ಭಟ್ಕಳ್ ತಾಲೂಕು
ಶಿವಮೊಗ್ಗ ಜಿಲ್ಲೆ
ಅರಬ್ಬೀ ಸಮುದ್ರ
ಸಂಟ್ ಮೇರಿಸ್ ದ್ವೀಪ
ಚಿಕ್ಕಮಗಳೂರು ಜಿಲ್ಲೆ
ದಕ್ಷಿಣ ಕನ್ನಡ
ಸೂಚ್ಯಂಕ
ಜಿಲ್ಲಾ ಸರಹದ್ದು
ತಾಲೂಕು ಸರಹದ್ದು
ಗ್ರಾಮ ಗಳ ಸರಹದ್ದು
ಹಾಲಾಡಿ ಯಿಂದ ಬಜೆ ವರೆಗೆ (ಬಜೆ ಆಣೆಕಟ್ಟು) ನೀರು ಸರಬರಾಜು ಪೈಪ್ ಲೈನ್ ಹಾದು ಹೋಗುವ ಗ್ರಾಮ ಗಳು
ಬಜೆ( ಆಣೆಕಟ್ಟು ) ಯಿಂದ ಮಣಿಪಾಲ ವರೆಗೆ ನೀರು ಸರಬರಾಜು ಪೈಪ್ ಲೈನ್ ಹಾದು ಹೋಗುವ ಗ್ರಾಮ ಗಳು
ನೀರಿನ ಬೇಡಿಕೆಯ ಯೋಜನೆಯಡಿಯಲ್ಲಿ ಒಳಪಡುವ ಗ್ರಾಮ ಗಳು
ಜಲ ಸಂಪನ್ಮೂಲಗಳು
D - ಬಜೆ ಆಣೆಕಟ್ಟು
KOLLUR
JADKAL
MUDOOR
KUNDAPURA(TMC)
UDUPI(CMC)
HALADY (76)
HEBRI
KARKALA(TMC)
NRDMS
KSCST
0 5 10 20 Kilometers
ನಕ್ಷೆ ತಯಾರಕರು : ಜಿಲ್ಲಾ ಎನ್. ಆರ್ . ಡಿ . ಎಂ . ಎಸ್ ಕೇಂದ್ರ , ಜಿಲ್ಲಾ ಪಂಚಾಯತ್ , ರಜತಾದ್ರಿ , ಮಣಿಪಾಲ , ಉಡುಪಿ



ಉಡುಪಿ ಜಿಲ್ಲೆಯ ನಗರ (CMC) ಪ್ರದೇಶಗಳಿಗೆ ವಾರಾಹಿ ನದಿಯಿಂದ ನೀರು
ಸರಬರಾಜು ಮಾಡುವ ಯೋಜನೆಯ ಕುರಿತು ಒಳಪಡುವ ಗ್ರಾಮಗಳ GIS ನಕ್ಷೆ
74°40'0"E
74°50'0"E
75°0'0"E
N
S
E
W
ಕುಂದಾಪುರ ತಾಲೂಕು
ಅರಬ್ಬೀ ಸಮುದ್ರ
ಸೆಂಟ್ ಮೇರಿಸ್ ದ್ವೀಪ
ಕಾರ್ಕಳ ತಾಲೂಕು
ದಕ್ಷಿಣ ಕನ್ನಡ
KAKKUNJE
VANDAR
HILIYANA
MANOOR
GILIYAR
SHIRIYARA
BILLADI
AVARSE
ACHALADY
BANNADY
VADDARSE
NANCHAR
KOTATHATTU
KAVADI
YEDTHADY
HEGGUNJE
33 SHIROOR
SALIGRAMA(TP)
HERADY
HOSALA
MOODAHADU
NADUR
KADUR
NALKUR
HANEHALLI
34 KUDI
PANDESHWARA
ACHUR
KODI
IRODY
KUMRAGOD
HANDADI
KENJOOR
38 KALTHUR
NEELAVAR
MATPADY
BALKUDRU
VARAMBALLI (CT)
CHANTHAR
HOSOOR
HARADI
CHERKADY
52 HEROOR (CT)
BAIKADY
AROOR
HALUVALLI
TONSE WEST
TONSE EAST (CT)
PERDOOR
UPPOOR
HAVANJE
RUKKEHALLI
BADANIDIYUR
KELARKALABETTU (OG)
BELLAMPALLI
BAIRAMPALLI
TENKANIDIYOOR (CT)
BELLARPADI
ATHRADI
UDUPI(CMC)
41 SHIROOR
AMBALPADY (OG)
BOMMARABETTU
BADAGABETTU (NO.80) (CT)
ANJARU
HIREBETTU
KUTHPADY (OG)
KUDI (82)
KORANGRAPADY (CT)
ALEVOOR (CT)
UDYAVARA (CT)
MARNE
MANIPURA (CT)
PERNANKILA
KOTE
KURKALU
BELLE
KATTINGERE
MOODABETTU (CT)
PANGALA
INNANJE
92 HEROOR
SHIRVA
MAJOOR
PADOOR
KAUP(TMC)
108 KALTHUR
BELPU
KUTHYAR
BADA (CT)
PILAR
YELLUR
SANTHOOR
TENKA
PADEBETTU
NANDICOOR
NADSAL (CT)
PALIMAR
HEJAMADI
ಸೂಚ್ಯಂಕ
- ತಾಲೂಕು ಸರಹದ್ದು
- ಗ್ರಾಮ ಸರಹದ್ದು
ಬಜೆ( ಆಣೆಕಟ್ಟು ) ಯಿಂದ ಮಣಿಪಾಲ ವರೆಗೆ ನೀರು ಸರಬರಾಜು ಪೈಪ್ ಲೈನ್ ಹಾದು ಹೋಗುವ ಗ್ರಾಮ ಗಳು
ಹಾಲಾಡಿ ಯಿಂದ ಬಜೆ ವರೆಗೆ (ಬಜೆ ಆಣೆಕಟ್ಟು) ನೀರು ಸರಬರಾಜು ಪೈಪ್ ಲೈನ್ ಹಾದು ಹೋಗುವ ಗ್ರಾಮ ಗಳು
ನೀರಿನ ಬೇಡಿಕೆಯ ಯೋಜನೆಯಡಿಯಲ್ಲಿ ಒಳಪಡುವ ಗ್ರಾಮ ಗಳು
- ಜಲ ಸಂಪನ್ಮೂಲ ಗಳು
D - ಬಜೆ ಆಣೆಕಟ್ಟು
0 3 6 12 Kilometers
NRDMS
THE SPATIAL SUPPORT FOR LOCAL LEVEL PLANNING
KSCST
ನಕ್ಷೆ ತಯಾರಕರು : ಜಿಲ್ಲಾ ಎನ್. ಆರ್. ಡಿ . ಎಂ . ಎಸ್ ಕೇಂದ್ರ , ಜಿಲ್ಲಾ ಪಂಚಾಯತ್ , ರಜತಾದ್ರಿ , ಮಣಿಪಾಲ , ಉಡುಪಿ

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ ಇಲಾಖೆಯಲ್ಲಿ ಜಿ.ಐ.ಎಸ್ ನ ಉಪಯೋಗಗಳು

**ಚಂದ್ರಶೇಖರ್ ಕೆ ಗುಂದ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಬಾಗಲಕೋಟ**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ ಇಲಾಖೆ, ಬೆಂಗಳೂರು ರವರು ಪ್ರಗತಿ ಪಥ 2016 ಮತ್ತು 2017 ರ ವರದಿ ಸಲ್ಲಿಸುವಂತೆ ಸೂಚಿಸಿರುತ್ತಾರೆ ಅದರಂತೆ ವರದಿಗೆ ಬೇಕಾದಂತಹ ನಕ್ಷೆಗಳನ್ನು ತಯಾರಿಸುವಂತೆ ಯೋಜನಾ ವಿಭಾಗ ಎನ್.ಆರ್.ಡಿ.ಎಮ್.ಎಸ್ ಕೇಂದ್ರಕ್ಕೆ ಸೂಚಿಸಿರುತ್ತದೆ.

**ಉದ್ದೇಶ**

ಮೇಲ್ಕಾಣಿಸಿದಂತೆ, ಪ್ರಗತಿ ಪಥ 2016 ಮತ್ತು 2017 ರ ವರದಿಗೆ ಪೂರಕವಾಗಿ ಲೋಕಸಭಾ ಮತಕ್ಷೇತ್ರವಾರು ಗ್ರಾಮ ಪಂಚಾಯತನ್ನು ವಿಂಗಡಿಸಿ, ಗ್ರಾಮ ಪಂಚಾಯತಿಯ ಮಾಹಿತಿಯನ್ನು ನಕ್ಷೆಗಳಲ್ಲಿ ನಮೂದಿಸಿ, ಬಾಗಲಕೋಟೆಯ 7 ಮತಕ್ಷೇತ್ರಗಳ ನಕ್ಷೆಗಳನ್ನು ಯೋಜನಾ ವಿಭಾಗಕ್ಕೆ ಎನ್.ಆರ್.ಡಿ.ಎಮ್.ಎಸ್ ಕೇಂದ್ರವು ಹಾರ್ಡ ಕಾಫಿ ಮತ್ತು ಸಾಫ್ಟ ಕಾಫಿಯನ್ನು ತಯಾರಿಸಿ, ಕೊಡುವಂತೆ ಹಾಗೆಯೇ ಯೋಜನಾವಾರು ಮಾಹಿತಿಯನ್ನು ಕ್ರೂಢೀಕರಿಸಲು, ಆಧುನೀಕರಿಸಲು, ಪರಿಶೀಲಿಸಿ, ದತ್ತಾಂಶದ ಪ್ರಗತಿ ವರದಿಯನ್ನು ಲೋಕಸಭಾ ಮತಕ್ಷೇತ್ರವಾರು ವಿಂಗಡಿಸಲು ಯೋಜನಾ ಶಾಖೆಗೆ ಸಹಕಾರ ನೀಡುವಂತೆ ಮತ್ತು ಕಾರ್ಯನಿರ್ವಹಿಸುವಂತೆ ಉದ್ದೇಶಿಸಿರುತ್ತಾರೆ.

**ವಿಧಾನ**

ಎನ್ಆರ್ಡಿಎಂಎಸ್, ಕೇಂದ್ರವು ಯೋಜನಾ ಶಾಖೆಯ ಸಿಬ್ಬಂದಿಯೊಂದಿಗೆ, ಜೊತೆಗೂಡಿ ಬಂದಂತಹ ಮಾಹಿತಿಗಳನ್ನು ಮತಕ್ಷೇತ್ರವಾರು ವರ್ಷವಾರು ಮಾಹಿತಿ ಕ್ರೂಢೀಕರಿಸಿ, ಪರಿಶೀಲಿಸಿ ಅದಕ್ಕೆ ಸಂಬಂದಿಸಿದಂತೆ ಮತಕ್ಷೇತ್ರವಾರು ಮೇರೆಗಳನ್ನು ತಯಾರಿಸಿ ಹಾಗೂ ಗ್ರಾಮ ಪಂಚಾಯತವಾರು, ಗ್ರಾಮಗಳ ಸಾಮಾನ್ಯ ವರ್ಗದ ಜನಸಂಖ್ಯೆ ಎಸ್ ಸಿ ಮಹಿಳೆ ಮತ್ತು ಪುರಷ / ಎಸ್ ಟಿ, ಮಹಿಳೆ ಮತ್ತು ಪುರಷ, ಮನೆಗಳ ಮಾಹಿತಿ ಭೌಗೋಳಿಕ ಕ್ಷೇತ್ರ /ವಿಸ್ತೀರ್ಣ ಇವುಗಳನ್ನು ವಿಶ್ಲೇಷಿಸಿ ಯೋಜನಾ ಶಾಖೆಗೆ ಒದಗಿಸಿದೆ.

**ವಿಧಾನಗಳು**

ಲೋಕಸಭಾ ಮತಕ್ಷೇತ್ರವಾರು ಚುನಾವಣಿಯ ಶಾಖೆಯ ಮಾಹಿತಿ ಪ್ರಕಾರ ಜಿಐಎಸ್-ತಂತ್ರಾಂಶದ ಮೂಲಕ ಅನುಷ್ಠಾನಗೊಳಿಸಿ, ಸಂಬಂಧಿಸಿದ ಪ್ರದೇಶದ ಮೇರೆಗಳನ್ನು ದತ್ತಾಂಶದಲ್ಲಿ ಸೇರ್ಪಡೆಗೊಳಿಸಿ, ಜಿಯೋ-ಪ್ರೋಸೆಸಿಂಗ್ ಉಪಕರಣದಲ್ಲಿ ಮೇರೆಗಳ ಪ್ರಕಾರ ಗ್ರಾಮ ಪಂಚಾಯತಗಳನ್ನು ಕ್ಲಿಪ್ ಮಾಡಿ, ಸಿಂಬೋಲಾಜಿನಲ್ಲಿನ ಯೂನಿಕ್ ಮೌಲ್ಯಗಳನ್ನು ಉಪಯೋಗಿಸಿ ಬಣ್ಣಗಳನ್ನು ವಿಂಗಡನೆ ಮಾಡಿ, ನಕ್ಷೆಯ ಮೂಲಕ ತಾಂತ್ರಿಕ ವರದಿ ತಯಾರಿಸಲಾಗಿದೆ ಹಾಗೂ ಎನ್ಆರ್ಡಿಎಂಎಸ್, ಕೇಂದ್ರದಲ್ಲಿ ಆಧುನಿಕರಿಸಿದ ಭೌಗೋಳಿಕ ದತ್ತಾಂಶದ ಮತ್ತು ಜನಗಣತಿ ಮಾಹಿತಿಯನ್ನು ಮತಕ್ಷೇತ್ರವಾರು ಡಿ.ಬಿ.ಎಪ್ ನಲ್ಲಿ ಬದಲಾಸಿ ಅಂಕಿ-ಅಂಶಗಳನ್ನು ಒದಗಿಸಲಾಗಿದೆ.

**ಬಳಕೆದಾರರ ಅವಶ್ಯಕತೆ**

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ü ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ, ಪ್ರಗತಿ ಪಥ 2016 ಮತ್ತು 2017ರ ವರದಿಗೆ ಅನೂಕೂಲವಾಗುವಂತೆ ಮತ ಕ್ಷೇತ್ರವಾರು ನಕ್ಷೆಗಳನ್ನು ತಯಾರಿಸಿ, ಸಂಬಂಧಿಸಿದ ಪ್ರದೇಶದ ಸಂಪೂರ್ಣ ಮಾಹಿತಿಯ ವಿವರಣೆ ತಿಳಿಯಲು ಬಳಕೆದಾರರಿಗೆ ಹಾಗೂ ಅಧಿಕಾರಿಗಳಿಗೆ ಅನೂಕೂಲವಾಗುವುದು.

**ಉಪಯೋಗಗಳು**

ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರದೇಶದಲ್ಲಿ ಕೈಗೂಂಡ ಕಾರ್ಯಕ್ರಮಗಳ ವಿವರಗಳ ಸಂಪೂರ್ಣ ಮಾಹಿತಿ ದೊರೆಯುವುದು ಹಾಗೂ ಯೋಜನಾವಾರು ಮತಕ್ಷೇತ್ರದಲ್ಲಿ ಆದಂತಹ ಪ್ರಗತಿ ಸಾರ್ವಜನಿಕರಿಗೆ ಸಹಾಯವಾಗುವಂತೆ ಮಾಹಿತಿ ನೀಡಲು ಅನೂಕೂಲವಾಗುವುದು.



# ಭೂ ಮಾಪನ ಕಂದಾಯ ವ್ಯವಸ್ಥೆ ಯಲ್ಲಿ ಜಿ.ಐ.ಎಸ್ ನ ಉಪಯೋಗಗಳು

**ಚಂದ್ರಶೇಖರ್ ಕೆ ಗುಂದ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಬಾಗಲಕೋಟ**

**ಪ್ರಸ್ತಾವನೆ**

ಮಾನ್ಯ ಭೂದಾಖಲೆಗಳ ಜಂಟಿ ನಿರ್ದೇಶಕರು ಆಯುಕ್ತರು, ಕಛೇರಿ ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ಸೂಚನೆ ಮೇರೆಗೆ.

**ಉದ್ದೇಶ**

ಮೇಲ್ಕಾಣಿಸಿದಂತೆ, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು, ಬಾಗಲಕೋಟರವರು ಎನ್‌ಆರ್ಡಿಎಂಎಸ್ ಕೇಂದ್ರಕ್ಕೆ ಬಾಗಲಕೋಟ ಜಿಲ್ಲೆಗೆ ಸಂಬಂಧಿಸಿದಂತೆ, ಸರ್ವೇ ಸರ್ಕಲ್‌ನ್ನು ಗುರುತಿಸುವ ಉದ್ದೇಶಕ್ಕಾಗಿ ಈಗಾಗಲೇ, ನಿರ್ಧರಿಸುವಂತೆ ಸರ್ಕಲ್‌ಗಳನ್ನು ಲಗತ್ತಿಸಿರುವ ಗ್ರಾಮಗಳ ಪಟ್ಟಿಯಂತೆ, ತಾಲ್ಲೂಕು ನಕಾಶಯಲ್ಲಿ ಗುರುತಿಸಿ, ನಕಾಶೆ ಹಾರ್ಡ್ ಕಾಫಿ ಮತ್ತು ಸಾಫ್ಟ್ ಕಾಫಿ ತಯಾರಿಸಿ ಕೊಡುವಂತೆ ಉದ್ದೇಶಿಸಿರುತ್ತಾರೆ.

**ವಿಧಾನ**

ಎನ್‌ಆರ್ಡಿಎಂಎಸ್, ಕೇಂದ್ರವು ಎಡಿಎಲ್‌ಆರ್ ಭೂದಾಖಲೆ ಇಲಾಖೆಯೊಂದಿಗೆ ಚರ್ಚಿಸಿ, ನಕ್ಷೆಗೆ ಸಂಬಂಧಿಸಿದ ವಿಲೇಜ್ ಅಕೌಂಟೆಂಟ್ ದತ್ತಾಂಶವನ್ನು ಹಾರ್ಡ್ ಕಾಫಿ ಮತ್ತು ಸಾಫ್ಟ್ ಕಾಫಿ ಪಡೆದು ಕೆಎಸ್‌ಸಿಎಸ್‌ಟಿಯ ನೈಸರ್ಗಿಕ ಸಂಪನ್ಮೂಲ ದತ್ತಾಂಶ ನಿರ್ವಹಣಾ ವ್ಯವಸ್ಥೆಯಲ್ಲಿರುವ ನಕ್ಷೆಗಳ ಸಹಾಯದೊಂದಿಗೆ ಸರ್ಕಲ್‌ಗಳ ಪ್ರದೇಶಗಳ ಮೇರೆಯನ್ನು ತಯಾರಿಸಿ, ಸದರಿ ಇಲಾಖೆಗೆ ಸಲ್ಲಿಸಿದೆ. ಪ್ರದೇಶದ ವಿವರಣೆಯನ್ನು GIS ತಂತ್ರಾಂಶದ ಮುಖಾಂತರ ವಿಶ್ಲೇಷಿಸುವುದು.

**ವಿಧಾನಗಳು**

ಪಡೆದಂತಹ ಮಾಹಿತಿಯನ್ನು ಜಿಐಎಸ್-ತಂತ್ರಾಂಶದ ಮೂಲಕ ಅನುಷ್ಠಾನಗೊಳಿಸಿ, ಸಂಬಂಧಿಸಿದ ಪ್ರದೇಶದ ಮೇರೆಗಳನ್ನು ದತ್ತಾಂಶದಲ್ಲಿ ಸೇರ್ಪಡೆಗೊಳಿಸಿ, ಜಿಯೋ-ಪ್ರೋಸೆಸಿಂಗ್ ಉಪಕರಣದಲ್ಲಿ ಇರುವಂತಹ ಸಿಂಬೋಲಾಜಿ ಗುರುತಿಸಿಕೊಂಡು ಸರ್ಕಲ್‌ಗಳ ಪ್ರದೇಶಗಳ ಎಲ್ಲ ಮೌಲ್ಯಗಳನ್ನು ಉಪಯೋಗಿಸಿ, ಮೇರೆ ತಯಾರಿಸಲಾಗಿದೆ. ಅದರೊಂದಿಗೆ, ಬಣ್ಣಗಳನ್ನು ವಿಂಗಡನೆ ಮಾಡಿ, ಪ್ರದೇಶಗಳ ಮಾದರಿ ನಕ್ಷೆಯ ಮೂಲಕ ತಾಂತ್ರಿಕ ವರದಿ ತಯಾರಿಸಲಾಗಿದೆ.

**ಬಳಕೆದಾರರ ಅವಶ್ಯಕತೆ**

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ¡ಜಿಲ್ಲಾದಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು ಬಾಗಲಕೋಟರವರು ಎನ್‌ಆರ್ಡಿಎಂಎಸ್ ಕೇಂದ್ರದ ನಕ್ಷೆಗಳ ಸಹಾಯದಿಂದ ಸಂಬಂಧಸಿದ ವಿಲೇಜ್ ಅಕೌಂಟೆಂಟ್ ರವರ ಸಂಪೂರ್ಣ ಪ್ರದೇಶದ ಮೇರೆಗಳ ಮಾಹಿತಿ ಹಾಗೂ ಸಂಬಂಧಿಸಿದ ಪ್ರದೇಶದ ಸಂಪೂರ್ಣ ಜವಾಬ್ದಾರಿ ನಿರ್ವಹಿಸಲು ಬಳಕೆದಾರರಿಗೆ ಹಾಗೂ ಅಧಿಕಾರಿಗಳಿಗೆ ಅನೂಕೂಲವಾಗುದು.

**ಉಪಯೋಗಳು**

ಆಯಾ ಪ್ರದೇಶದ ವಿಲೇಜ್ ಅಕೌಂಟೆಂಟ್ಗಳು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ತರಹದ ಕಾರ್ಯವ್ಯವಸ್ಥೆಯನ್ನು ಕೈಗೊಳ್ಳಲು ಉಪಯೋಗವಾಗುವುದು ಹಾಗೂ ಸದರಿ ಕ್ಷೇತ್ರಕ್ಕೆ ಸಂಬಂದಿಸಿದಂತೆ, ತಮ್ಮ ತಮ್ಮ ಮೇರೆಗಳನ್ನು ಸಾರ್ವಜನಿಕರಿಗೆ ಸಹಾಯವಾಗುವಂತೆ ಮಾಹಿತಿ ನೀಡುತ್ತಾರೆ.



# ನೂತನವಾಗಿ ಸ್ಥಾಪಿತವಾಗಲಿರುವ ಅಜ್ಜಂಪುರ ಹೊಸ ತಾಲ್ಲೂಕಿನ ಜಿ.ಐ.ಎಸ್ ಮಾದರಿ ನಕ್ಷೆ

**ಬಸವರಾಜ್ ಬಾರ್ಕಿ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಚಿಕ್ಕಮಗಳೂರು**

**ಉದ್ದೇಶ**

ಕರ್ನಾಟಕ ಸರ್ಕಾರದ ಹೊಸ ತಾಲ್ಲೂಕುಗಳ ಘೋಷಣೆಯಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನೂತನವಾಗಿ ಅಜ್ಜಂಪುರ ಹೊಸ ತಾಲ್ಲೂಕು ರಚನೆಯಾಗಲಿದ್ದು, ಸದರಿ ತಾಲ್ಲೂಕಿನ ವ್ಯಾಪ್ತಿಗೆ ಒಳಪಡುವ ಕಂದಾಯ ಗ್ರಾಮಗಳ ಮಾಹಿತಿಯನ್ನೊಳಗೊಂಡ ನಕ್ಷೆಯನ್ನು ನೀಡುವಂತೆ, ಜಿಲ್ಲಾಧಿಕಾರಿಗಳು,ಜಿಲ್ಲಾಡಳಿತ, ಚಿಕ್ಕಮಗಳೂರು ಇವರು ಕೋರಿದ್ದು, ಜಿಲ್ಲಾ NRDMS ಕೇಂದ್ರವು ನಕಾಶೆಯನ್ನು GIS ತಂತ್ರಜ್ಞಾನ ಉಪಯೋಗಿಸಿಕೊಂಡು ತಯಾರಿಸಿ ಸದರಿ ಕಛೇರಿಗೆ ಸಲ್ಲಿಸಿರುತ್ತದೆ.

**ವಿಧಾನ**

ಚಿಕ್ಕಮಗಳೂರು ಜಿಲ್ಲೆಯಲ್ಲಿ ನೂತನವಾಗಿ ಸ್ಥಾಪಿತವಾಗಲಿರುವ ಅಜ್ಜಂಪುರ ಹೊಸ ತಾಲ್ಲೂಕು ವ್ಯಾಪ್ತಿಗೆ ಒಳಪಡುವ 104 ಕಂದಾಯ ಗ್ರಾಮಗಳ ಮಾಹಿತಿಯನ್ನು GIS ತಂತ್ರಜ್ಞಾನದ ಮೂಲಕ NRDMS ದತ್ತಾಂಶದಲ್ಲಿ ಇಂಧೀಕರಿಸಿ, ಸದರಿ ಇಲಾಖೆಯ ಅವಶ್ಯಕತೆಯಂತೆ ನಕಾಶೆಯನ್ನು ತಯಾರಿಸಿ ಒದಗಿಸಬಹುದಾಗಿದೆ.

**ಅಂಕಿಅಂಶಗಳ ಅವಶ್ಯಕತೆ**

- ಅಜ್ಜಂಪುರ ಹೊಸ ತಾಲ್ಲೂಕು ವ್ಯಾಪ್ತಿಗೆ ಒಳಪಡುವ 104 ಕಂದಾಯ ಗ್ರಾಮಗಳ ಮಾಹಿತಿ ಅವಶ್ಯವಿರುತ್ತದೆ.

**GIS ನಕ್ಷೆಯ ಉಪಯೋಗ/ಬಳಕೆದಾರನ ಅವಶ್ಯಕತೆ**

- ಚಿಕ್ಕಮಗಳೂರು ಜಿಲ್ಲೆಯಲ್ಲಿ ನೂತನವಾಗಿ ಸ್ಥಾಪಿತವಾಗಲಿರುವ ಅಜ್ಜಂಪುರ ಹೊಸ ತಾಲ್ಲೂಕು ವ್ಯಾಪ್ತಿಗೆ ಒಳಪಡುವ 104 ಕಂದಾಯ ಗ್ರಾಮಗಳ ಮಾಹಿತಿಯನ್ನು ತೋರಿಸುವ ತಾಲ್ಲೂಕು ನಕಾಶೆಯನ್ನು ಸರ್ಕಾರಕ್ಕೆ ಸಲ್ಲಿಸಲು ಉಪಯೋಗಿಸಲಾಗಿರುತ್ತದೆ ಹಾಗೂ ಕರ್ನಾಟಕ ಗೆಜೆಟ್ನಲ್ಲಿ ಪ್ರಕಟಿಸಲು ಸದರಿ ನಕಾಶೆ ಬಳಕೆಯಾಗಿರುತ್ತದೆ.
- ಸದರಿ ನಕಾಶೆಯು ಹೊಸ ತಾಲ್ಲೂಕು ಜಾರಿಯಾದ ನಂತರ ಆಡಳಿತ ನಡೆಸಲು/ಸರಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುಕೂಲವಾಗುತ್ತದೆ.

ಈ ಕೆಳಗೆ ತೋರಿಸಿದ ನಕಾಶೆಯ ಸಾಫ್ಟ್ ಪ್ರತಿ ಹಾಗೂ ಮುದ್ರಿತ ಕಲರ್ ಪ್ರತಿಗಳನ್ನು ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ, ಚಿಕ್ಕಮಗಳೂರುರವರ ಕಛೇರಿಗೆ NRDMS ಕೇಂದ್ರವು ಒದಗಿಸಿರುತ್ತದೆ.


AJJAMPURA TALUK, CHIKKAMAGALURU DISTRICT
Legend
Taluk Head Quater
HOBLI NAME
CHOWLIHIRIYUR
HIRENALLURU
AJJAMPURA
AMRUTAPURA
SHIVANI
0
5
10
20
KM
Prepared At: District NRDMS Centre, ZP, Chikkamagaluru
75°55'0"E
76°0'0"E
76°5'0"E
76°10'0"E
13°57'0"N
13°51'30"N
13°46'0"N
13°40'30"N
13°35'0"N




ಮಮತಾ ಕೆ ಎಸ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ದಕ್ಷಿಣ ಕನ್ನಡ

# ಪಶುಪಾಲನಾ ಮತ್ತು ವೈದ್ಯಕೀಯ ಸೇವಾ ಇಲಾಖೆಗೆ ಜಿ.ಐ.ಎಸ್ ನ ಉಪಯೋಗಗಳು

**ಬಸವರಾಜ್ ಬಾರ್ಕಿ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಚಿಕ್ಕಮಗಳೂರು**

**ಉದ್ದೇಶ**

ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಚಿಕ್ಕಮಗಳೂರು ಇವರು ಜಿಲ್ಲೆಯಲ್ಲಿರುವ ಜಾನುವಾರುಗಳ ಪಾಲನೆಗಾಗಿ ಹಾಗೂ ಮೇವು ಬ್ಯಾಂಕುಗಳನ್ನು ತೆರೆಯಲು ಅನುಕೂಲವಾಗುವಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಸಂಸ್ಥೆಗಳನ್ನು ತೋರಿಸುವಂತೆ NRDMS ಕೇಂದ್ರದಿಂದ ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು GIS ನಕಾಶೆಯನ್ನು ನೀಡುವಂತೆ ಬರೆದಿರುವ ಪತ್ರದ ಹಿನ್ನೆಲೆಯಲ್ಲಿ ಸದರಿ ಮಾಹಿತಿಯನ್ನು ತೋರಿಸಿ ನಕ್ಷೆಯನ್ನು GIS ತಂತ್ರಜ್ಞಾನ ಉಪಯೋಗಿಸಿಕೊಂಡು ತಯಾರಿಸಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಸಲ್ಲಿಸಲಾಗಿರುತ್ತದೆ.

**ವಿಧಾನ**

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವ್ಯಾಪ್ತಿಯಲ್ಲಿ ಬರುವ ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ,ಪ್ರಾಥಮಿಕ ಪಶು ಚಿಕಿತ್ಸಾಲಯ, ಅಮೃತ್ ಮಹಲ್ ಉಪಕೇಂದ್ರ, ಅಮೃತ್ ಮಹಲ್ ಸಂವರ್ಧನ ಕೇಂದ್ರ, ಕೋಳಿ ವಿಸ್ತರಣಾ ಕೇಂದ್ರ, ಗೋಸದನ ಹಾಗೂ ಹಂದಿತಳಿ ಸಂವರ್ಧನ ಕೇಂದ್ರ ಮಾಹಿತಿಯನ್ನು GIS ತಂತ್ರಜ್ಞಾನದ ಸಹಾಯದಿಂದ NRDMS ದತ್ತಾಂಶದಲ್ಲಿ ಇಂಧೀಕರಿಸಿ, ಸದರಿ ಇಲಾಖೆಯ ಅವಶ್ಯಕತೆಯಂತೆ ನಕಾಶೆಯನ್ನು ತಯಾರಿಸಿ ಒದಗಿಸಬಹುದಾಗಿದೆ.

**ಅಂಕಿಅಂಶಗಳ ಅವಶ್ಯಕತೆ**

- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವ್ಯಾಪ್ತಿಯಲ್ಲಿ ಬರುವ ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ,ಪ್ರಾಥಮಿಕ ಪಶು ಚಿಕಿತ್ಸಾಲಯ, ಅಮೃತ್ ಮಹಲ್ ಉಪಕೇಂದ್ರ, ಅಮೃತ್ ಮಹಲ್ ಸಂವರ್ಧನ ಕೇಂದ್ರ, ಕೋಳಿ ವಿಸ್ತರಣಾ ಕೇಂದ್ರ, ಗೋಸದನ ಹಾಗೂ ಹಂದಿತಳಿ ಸಂವರ್ಧನ ಕೇಂದ್ರ ಮಾಹಿತಿ.
- ಜಾನುವಾರುಗಳ ಜನಗಣತಿ ಮಾಹಿತಿ ಅವಶ್ಯವಿರುತ್ತದೆ.

**GIS ನಕ್ಷೆಯ ಉಪಯೋಗ/ಬಳಕೆದಾರನ ಅವಶ್ಯಕತೆ**

- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವ್ಯಾಪ್ತಿಯಲ್ಲಿ ಬರುವ ಇಲಾಖೆಯ ಸಂಸ್ಥೆಗಳ ಮೂಲಕ ಜಿಲ್ಲೆಯಲ್ಲಿರುವ ಜಾನುವಾರುಗಳ ಪಾಲನೆ ಪೋಷಣೆ ಹಾಗೂ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮಾಡಲು ಸದರಿ ನಕಾಶೆಗಳು ಅನುಕೂಲವಾಗುತ್ತದೆ.
- ತಾಲ್ಲೂಕುವಾರು ಜಾನುವಾರುಗಳ ತಳಿಗಳ ಮಾಹಿತಿ ತಿಳಿಯಲು ಸಹಾಯವಾಗುತ್ತದೆ.

ಈ ಕೆಳಗೆ ತೋರಿಸಿದ ತಾಲ್ಲೂಕುವಾರು ನಕಾಶೆಗಳ ಸಾಫ್ಟ್ ಪ್ರತಿ ಹಾಗೂ ಮುದ್ರಿತ ಕಲರ್ ಪ್ರತಿಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಕ್ಕಮಗಳೂರುರವರಿಗೆ NRDMS ಕೇಂದ್ರವು ಒದಗಿಸಿರುತ್ತದೆ.



# ಅಂತರ್ಜಲ ನಿರ್ದೇಶನಾಲಯ ಇಲಾಖೆಗೆ ಜಿ.ಐ.ಎಸ್ ನ ಉಪಯೋಗಗಳು

**ಬಸವರಾಜ್ ಬಾರ್ಕಿ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಚಿಕ್ಕಮಗಳೂರು**

**ಉದ್ದೇಶ**

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಂತರ್ಜಲ ನಿರ್ದೇಶನಾಲಯದ ಭೂವಿಜ್ಞಾನಿಗಳು ಪ್ರತಿ ತಿಂಗಳು ವೀಕ್ಷಣಾ ಕೊಳವೆಬಾವಿಗಳಲ್ಲಿ ಜಲಮಟ್ಟವನ್ನು ಅಳತೆ ಮಾಡಲಾಗುತ್ತಿದ್ದು, ಇದನ್ನು ಸ್ಥಿರ ಜಲಮಟ್ಟ ಎಂದು ಕರೆಯಲಾಗುತ್ತಿದೆ. ಸದರಿ ವೀಕ್ಷಣಾ ಕೊಳವೆ ಬಾವಿಗಳ GPS ಮ್ಯಾಪಿಂಗ್ ಹಾಗೂ 2017ರ ಜನವರಿ ಯಿಂದ ಆಗಸ್ಟ್ ಮಾಹೆವರೆಗಿನ ಸ್ಥಿರ ಜಲಮಟ್ಟದ ಮಾಹಿತಿಯನ್ನು ತೋರಿಸುವ GIS ನಕಾಶೆಯನ್ನು ನೀಡುವಂತೆ, ಚಿಕ್ಕಮಗಳೂರು ಜಿಲ್ಲೆಯ ಅಂತರ್ಜಲ ನಿರ್ದೇಶನಾಲಯದ ಭೂವಿಜ್ಞಾನಿಗಳ ಕೋರಿಕೆಯಂತೆ ಜಿಲ್ಲಾ NRDMS ಕೇಂದ್ರವು ಸದರಿ ನಕಾಶೆಯನ್ನು GIS ತಂತ್ರಜ್ಞಾನ ಉಪಯೋಗಿಸಿಕೊಂಡು ತಯಾರಿಸಿ, ಅಂತರ್ಜಲ ನಿರ್ದೇಶನಾಲಯದ ಭೂವಿಜ್ಞಾನಿಗಳಿಗೆ ನೀಡಲಾಯಿತು.

**ವಿಧಾನ**

ಜಿಲ್ಲೆಯಲ್ಲಿರುವ ವೀಕ್ಷಣಾ ಕೊಳವೆ ಬಾವಿಗಳ GPS ಸರ್ವೇಕ್ಷಣೆ ಮಾಡಿ, ಭೌಗೋಳಿಕ ಮಾಹಿತಿ ಹಾಗೂ 2017ರ ಜನವರಿಯಿಂದ ಆಗಸ್ಟ್ ಮಾಹೆವರೆಗಿನ ಸದರಿ ಕೊಳವೆಬಾವಿಗಳ ಸ್ಥಿರ ಜಲಮಟ್ಟದ ಮಾಹಿತಿಯನ್ನು NRDMS ದತ್ತಾಂಶದಲ್ಲಿ ಇಂಧೀಕರಿಸಿ, ಸದರಿ ಇಲಾಖೆಯ ಅವಶ್ಯಕತೆಗನುಗುಣವಾಗಿ ನಕಾಶೆಯನ್ನು ತಯಾರಿಸಿ ಒದಗಿಸಬಹುದು.

**ಅಂಕಿಅಂಶಗಳ ಅವಶ್ಯಕತೆ**

- ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ವೀಕ್ಷಣಾ ಕೊಳವೆಬಾವಿಗಳ GPS Waypoints ಮಾಹಿತಿ.
- 2017ರ ಜನವರಿ ಮಾಹೆಯಿಂದ ಆಗಸ್ಟ್ ಮಾಹೆವರೆಗಿನ ಸ್ಥಿರ ಜಲಮಟ್ಟದ ಅಂಕಿಸಂಖ್ಯೆಗಳ ಮಾಹಿತಿ ಅವಶ್ಯಕವಿರುತ್ತದೆ.
- ಜಿಲ್ಲಾ NRDMS ಕೇಂದ್ರದಲ್ಲಿರುವ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮಗಳ ಭೌಗೋಳಿಕ ಸರಹದ್ದು ಮಾಹಿತಿ ಅವಶ್ಯಕವಿರುತ್ತದೆ.

**GIS ನಕ್ಷೆಯ ಉಪಯೋಗ/ಬಳಕೆದಾರನ ಅವಶ್ಯಕತೆ**

- ಸದರಿ GIS ನಕಾಶೆಯು ಪ್ರತಿ ತಿಂಗಳು ವೀಕ್ಷಣಾ ಕೊಳವೆ ಬಾವಿಗಳ ಸ್ಥಿರಜಲಮಟ್ಟದ ವಸ್ತುಸ್ಥಿತಿಯನ್ನು ತಿಳಿಯಲು ಹಾಗೂ ಸದರಿ ಮಾಹಿತಿಯನ್ನು ಸರಕಾರಕ್ಕೆ ವರದಿ ಸಲ್ಲಿಸಲು ಅನುಕೂಲವಾಗುತ್ತದೆ.
- ಅಂತರ್ಜಲದ ನೀರಿನ ಮಟ್ಟದ ಪ್ರಮಾಣಕ್ಕನುಗುಣವಾಗಿ ಇಲಾಖೆಯು ಜಿಲ್ಲೆಯಲ್ಲಿರುವ ರೈತರಿಗೆ ಕೊಳವೆಬಾವಿಗಳನ್ನು ಕೊರೆಯಲು ಪರವಾನಿಗೆ ನೀಡಲು ಅನುಕೂಲವಾತ್ತದೆ.
- ಅಂತರ್ಜಲದ ನೀರಿನ ಮಟ್ಟದ ಪ್ರಮಾಣ ಕಡಿಮೆ ಇರುವ ಪ್ರದೇಶಗಳನ್ನು ಗುರುತಿಸಿ, ಅಂತರ್ಜಲ ಮರುಪೂರಣ ಮಾಡಲು ಅನುಕೂಲವಾಗುತ್ತದೆ.

ಈ ಕೆಳಗೆ ತೋರಿಸಿದ ನಕಾಶೆಗಳ ಸಾಫ್ಟ್ ಪ್ರತಿ ಹಾಗೂ ಮುದ್ರಿತ ಕಲರ್ ಪ್ರತಿಗಳನ್ನು ಚಿಕ್ಕಮಗಳೂರು ಜಿಲ್ಲೆಯ ಅಂತರ್ಜಲ ನಿರ್ದೇಶನಾಲಯದ ಭೂವಿಜ್ಞಾನಿಗಳ ಇಲಾಖೆ, ಚಿಕ್ಕಮಗಳೂರುರವರಿಗೆ NRDMS ಕೇಂದ್ರವು ಒದಗಿಸಿರುತ್ತದೆ.



# ಪ್ರವಾಹ ಮೌಲ್ಯಮಾಪನದಲ್ಲಿ ಜಿ.ಐ.ಎಸ್ ತಂತ್ರಜ್ಞಾನ ಬಳಕೆ

**ಜಿ ಬಿ ರಾಮಚಂದ್ರ ರೆಡ್ಡಿ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಬಳ್ಳಾರಿ**

**ಇಲಾಖೆ**

ಕೃಷಿ, ಕಂದಾಯ ಮತ್ತು ಜಿಲ್ಲಾ ಪಂಚಾಯತ್ ಕಛೇರಿ, ಬಳ್ಳಾರಿ. ಮಾಹಿತಿ ನೀಡಿದ ಇಲಾಖೆ ಕೃಷಿ ಮತ್ತು ಕಂದಾಯ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು.

**ಉದ್ದೇಶ**

ಕೃಷಿ ಇಲಾಖೆ, ಜಿಲ್ಲಾ ಪಂಚಾಯತ್ ಮತ್ತು ಕಂದಾಯ ಇಲಾಖೆಯವರ ಮನವಿಯಂತೆ ಅತಿ ಹೆಚ್ಚು ಮಳೆಯಾಗಿ ಹಾನಿಯಾಗಿರುವ ಹಗರಿ ನದಿ ಪ್ರದೇಶದ ಗ್ರಾಮಗಳಾದ ಜಾಲಿಹಾಳು, ಎರ್ರಗುಡಿ, ಹಂದಿಹಾಳು ಗ್ರಾಮಗಳಲ್ಲಿ ಎಷ್ಟು ಪ್ರಮಾಣದ ಪ್ರದೇಶ ಹಾಳಾಗಿದೆ. ಆ ಪ್ರದೇಶಕ್ಕೆ ಪರಿಹಾರ ನೀಡಲು ಮತ್ತು ಅತಿ ಹೆಚ್ಚು ಮಳೆಯಿಂದ ಹಾಳಾಗಿರುವ ಗ್ರಾಮಗಳ ವೀಕ್ಷಣೆ ಮತ್ತು ಪರಿಶೀಲನೆ ಮಾಡುವುದು ಇವರ ಮುಖ್ಯ ಉದ್ದೇಶ. ಇದನ್ನು ಜಿ.ಐ.ಎಸ್. ತಂತ್ರಜ್ಞಾನದ ಸಹಾಯದಿಂದ ಎಷ್ಟು ಪ್ರದೇಶ ಹಾನಿಗೊಳಗಾಗಿದೆ ಎಂಬುದನ್ನು ಅಂದಾಜು ಮಾಡುವುದು ಇವರ ಮುಖ್ಯ ಉದ್ದೇಶ.

**ವಿಧಾನ**

ಇಲಾಖೆಯವರು ನೀಡಿರುವ ನಿಖರ ಮಾಹಿತಿಯನ್ನು ಅನುಸರಿಸಿ, ಅತಿ ಹೆಚ್ಚು ಮಳೆಯಿಂದ ಹಾನಿಯಾಗಿರುವ ಗ್ರಾಮಗಳು ಮತ್ತು ಆ ಗ್ರಾಮಗಳಿಗೆ ಸಂಬಂಧಿಸಿದ ಪ್ರದೇಶಗಳನ್ನು ನಕ್ಷೆಯ ಮೂಲಕ ಗುರುತಿಸಲಾಯಿತು.

- ಹಾನಿಗೊಳಗಾದ ಗ್ರಾಮಗಳ ನಿಖರ ಮಾಹಿತಿ, ಜನಗಣತಿ ಮಾಹಿತಿ ಮತ್ತು ಆ ಗ್ರಾಮಗಳಿಗೆ ಸಂಬಂಧಿಸಿದ ಪ್ರದೇಶಗಳ ಮಾಹಿತಿಯನ್ನು ಪಡೆಯಲಾಯಿತು.
- ಮಳೆಯಿಂದ ಹಾನಿಗೊಳಗಾದ ಗ್ರಾಮಗಳ ಪಟ್ಟಿ ಇದಕ್ಕೆ ಸಂಬಂಧಿಸಿದ ಇಲಾಖೆಯವರ ಸಹಾಯ ಮತ್ತು ಮಾರ್ಗದರ್ಶನ ಹಾಗೂ ನಿಖರ ಮಾಹಿತಿ ಪಡೆದು ನಕ್ಷೆಯನ್ನು ತಯಾರಿಸಲಾಯಿತು.
- ಎಲ್ಲಾ ಮಾಹಿತಿಯನ್ನು ಇಲಾಖೆಯವರಿಂದ ಪಡೆದು ಜಿ.ಐ.ಎಸ್ ತಂತ್ರಜ್ಞಾನದಿಂದ ಹೆಚ್ಚು ಮಳೆಯಿಂದ ಹಾನಿಗೊಳಗಾದ ಪ್ರದೇಶಗಳು ಎಷ್ಟರ ಮಟ್ಟಿಗೆ ಹಾನಿಯಾಗಿವೆ ಅದರಿಂದ ಯಾವ ರೀತಿ ಪರಿಹಾರ ನೀಡಬಹುದು ಎನ್ನುವುದನ್ನು ಅಂದಾಜಿಸಬಹುದು ಮತ್ತು ಪರಿಹಾರ ಸೂಚಿಸಬಹುದು.
- ಈ ನಕ್ಷೆಯನ್ನು ಮ್ಯಾಪಿಂಗ್ ಸಾಫ್ಟ್‌ವೇರ್ ನಲ್ಲಿ ಡಾಟಾಎಂಟ್ರಿ ಮಾಡಿ ಅದನ್ನು Shapefile ಗೆ ಕನ್ವರ್ಟ್ ಮಾಡಿ ArcGIS ನಲ್ಲಿ ನಕ್ಷೆಯನ್ನು ತಯಾರಿಸಿ ಇಲಾಖೆಯವರಿಗೆ ನೀಡಲಾಯಿತು.

**ಅಂಕಿ ಅಂಶಗಳ ಅವಶ್ಯಕತೆ**

- ಅತಿ ಹೆಚ್ಚು ಮಳೆಯಿಂದ ಹಾನಿಗೊಳಗಾದ ಪ್ರದೇಶಗಳು ಮತ್ತು ಗ್ರಾಮಗಳ ಪಟ್ಟಿ ಮತ್ತು ಮಾಹಿತಿ ಅವಶ್ಯವಾಗಿತ್ತು.
- ಹಾನಿಗೊಳಗಾದ ಪ್ರದೇಶವನ್ನು ಗುರುತಿಸಲು ಇಲಾಖೆಯವರ ಸಹಾಯ & ಮಾರ್ಗದರ್ಶನ ಅವಶ್ಯವಾಗಿತ್ತು.

➢ ಹೆಚ್ಚು ಮಳೆಯಿಂದ ಹಾನಿಗೊಳಗಾದ ಗ್ರಾಮಗಳು ಮತ್ತು ಪ್ರದೇಶಗಳ ಅಂಕಿ ಅಂಶಗಳ ದತ್ತಾಂಶ ಮತ್ತು ನಿಖರ ಮಾಹಿತಿ ಉದಾಹರಣೆಗೆ:- ಗ್ರಾಮಗಳ ಜನಗಣತಿ ಇತರೆ ಇಲಾಖೆಗೆ ಸಂಬಂಧಿಸಿದ ಮಾಹಿತಿ ಅವಶ್ಯವಾಗಿತ್ತು.




**eÁ°ºÁ¼ÀÄ, JgÀæUÀÄr UÁæªÀÄU¼ÀÄ**





# ಹಿಂದುಳಿದ ಗ್ರಾಮಗಳನ್ನು ಆಯ್ಕೆ ಮಾಡುವ ಬಗ್ಗೆ

**ಜಿ ಬಿ ರಾಮಚಂದ್ರ ರೆಡ್ಡಿ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಬಳ್ಳಾರಿ**

**ಉದ್ದೇಶ**

ಉಪ ಕಾರ್ಯದಶಿಗಳು, ಅಭಿವೃದ್ಧಿ ಇಲಾಖೆ ಇವರ ಸೂಚನೆಯ ಮೇರೆಗೆ ಸಂಡೂರು ತಾಲ್ಲೂಕಿನ ನರಸಿಂಗಾಪುರ ಗ್ರಾಮವನ್ನು ಸಂಸದರ ಆದರ್ಶ ಗ್ರಾಮ ಎಂದು ಪರಿಗಣಿಸಲಾಗಿದ್ದು. ಈ ಗ್ರಾಮವು ಹಿಂದುಳಿದ ಮತ್ತು ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿಲ್ಲದ ಕಾರಣ ರಾಜ್ಯ ಸರ್ಕಾರವು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಆಯ್ಕೆ ಮಾಡಲಾಯಿತು.

**ವಿಧಾನ**

ಈ ಕೆಳಕಂಡ ಅಂಶಗಳನ್ನು ಅನುಸರಿಸಿ ಸಂಸದರ ಗ್ರಾಮವನ್ನು ಆಯ್ಕೆಮಾಡಲಾಗಿದೆ ಮತ್ತು ಈ ಗ್ರಾಮದಲ್ಲಿ ದೊರೆಯುವ ಎಲ್ಲಾ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂದು ನಕ್ಷೆಯ ಮೇಲಿನಂತೆ ತೊರಿಸಲಾಗುವುದು.

- ಇತ್ತೀಚಿನ ಜನಗಣತಿ ಮೂಲಭೂತ ಸೌಕರ್ಯಗಳ ಮಾಹಿತಿ ಇತರ ಸ್ವಾಭಾವಿಕ ಸಂಪನ್ಮೂಲಗಳ ಮಾಹಿತಿಯನ್ನು ಇಲಾಖೆ ಸಿಬ್ಬಂದಿ ಯವರ ಸಹಾಯದಿಂದ ಪಡೆಯಲಾಯಿತು.
- ಈ ಆಯ್ಕೆ ಗ್ರಾಮದ ಕಂದಾಯ ಪ್ರದೇಶ ಇತರೆ ಮಾಹಿತಿ ಪಡೆಯಲಾಯಿತು
- ಸಿಬ್ಬಂದಿಯ ಸಹಾಯದಿಂದ ನಿಖರ ಮಾಹಿತಿಯನ್ನು ಪಡೆದು ಜಿ.ಐ.ಎಸ್. ತಂತ್ರಾಂಶದ ಸಹಾಯದಿಂದ ಬೇರೆ ಬೇರೆ ರೀತಿಯ ನಕ್ಷೆ ತಯಾರಿಸಲು ವೆಕ್ಟರ್ ಡಾಟಾವನ್ನು ತಯಾರಿಸಿ ಕೊಳ್ಳಲಾಯಿತು.
- ArcGIS ಸಾಫ್ಟವೇರ್ ನ ಸಹಾಯದಿಂದ ದಿನಾಂಕವನ್ನು entry ಮಾಡಲಾಯಿತು ಬಹು ಬಳಕೆ ನಕ್ಷೆಯನ್ನು ArcGIS ನ ಸಹಾಯದಿಂದ ನಕ್ಷೆಯನ್ನು ತಯಾರಿಸಲಾಯಿತು.
- ಆದರ್ಶ ಗ್ರಾಮಕ್ಕೆ ಸಂಬಂಧಿಸಿದಂತೆ Arcgis & Mapinfo ಸಾಫ್ಟವೇರ್ ಸಹಾಯದಿಂದ ಇಲಾಖೆಯವರ ಸೂಚನೆಯಂತೆ ಅವರು ಕೇಳಿರುವ ನಕ್ಷೆಗಳನ್ನು ತಯಾರಿಸಿ ಕೊಡಲಾಯಿತು.

**ಅಂಕಿ ಅಂಶಗಳ ಅವಶ್ಯಕತೆ**

- ಸಂಡೂರು ತಾಲ್ಲೂಕಿನ ನರಸಿಂಗಾರಪುರ ಕಂದಾಯ ಗ್ರಾಮದ ಗಡಿ ಪ್ರದೇಶದ ಮಾಹಿತಿ.
- ಆ ಗ್ರಾಮದ ಜನಸಂಖ್ಯೆ ಮತ್ತು ಇತರೆ ಅಂಕಿ ಅಂಶಗಳ ನಿಖರ ಮಾಹಿತಿ
- ಈ ಸಂಸದರ ಆದರ್ಶ ಗ್ರಾಮದ ನಕ್ಷೆಯನ್ನು ತಯಾರಿಸಲು ಸಂಬಂಧಿಸಿದ ನುರಿತ ಸಿಬ್ಬಂದಿಯ ಸಹಾಯ ಪಡೆಯಲಾಯಿತು.
- ಆ ಗ್ರಾಮದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಒದಗಿಸಿದ ಸರ್ಕಾರಿ ಸೌಲಬ್ಯಗಳ ಮಾಹಿತಿ ಮತ್ತು ಇತರೆ ಅಂಶಗಳು

**ಬಳಕೆದಾರರ ಅವಶ್ಯಕತೆ**

- ಸಂಸದರ ಆದರ್ಶ ಗ್ರಾಮವನ್ನು ಸಂಸದರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದಂತೆ ನರಸಿಂಗಾಪುರ ಗ್ರಾಮವನ್ನು ಆಯ್ಕೆ ಮಾಡಲಾಗಿದ್ದು ಎನ್.ಆರ್.ಡಿ.ಎಂ.ಎಸ್. ಶಾಖೆಯ ಸಹಾಯದಿಂದ ಜಿ.ಐ.ಎಸ್. ತಂತ್ರಜ್ಞಾನವನ್ನು ಬಳಸಿ ಈ ಗ್ರಾಮದಲ್ಲಿರುವ ಸಂಪನ್ಮೂಲಗಳು ಮತ್ತು ಮೂಲಭೂತ ಸೌಕರ್ಯಗಳನ್ನು ನಕ್ಷೆಗಳ ಸಹಾಯದಿಂದ ಗುರುತಿಸಲಾಯಿತು.
- ಇಂತಹ ಗ್ರಾಮಗಳನ್ನು ಅಭಿವೃದ್ಧಿ ಮಾಡುವುದರಿಂದ ಇನ್ನಿತರೆ ಹಿಂದುಳಿದ ಗ್ರಾಮಗಳನ್ನು ಅಭಿವೃದ್ಧಿ ಪಡಿಸಲು ಮಾದರಿ ಮತ್ತು ಆದರ್ಶವಾಗಿರುತ್ತದೆ. ಸಂಬಂಧಿಸಿದ ಸಿಬ್ಬಂದಿಯವರ ಸಹಾಯದಿಂದ ವೈಜ್ಞಾನಿಕವಾಗಿ ಜಿ.ಐ.ಎಸ್. ತಂತ್ರಜ್ಞಾನದ ಸಹಾಯದಿಂದ ಭೂ ಬಳಕೆ ರಸ್ತೆ ಮೂಲಬೂತ ಸೌಕರ್ಯಗಳ ನಕ್ಷೆ ಮತ್ತು ಸರ್ಕಾರಿ ಕಟ್ಟಡಗಳು ಇತರೆ ಸರ್ಕಾರಿ ಸೌಲಬ್ಯಗಳನ್ನು ಈ ನಕ್ಷೆಯ ಮೂಲಕ ತೊರಿಸಲಾಯಿತು.
- ಈ ಆದರ್ಶ ಗ್ರಾಮಗಳ ಆಯ್ಕೆ ಮಾಡಿ ಕೊಳ್ಳುವುದರಿಂದ ಇತರೆ ತಾಲ್ಲೂಕಿನ ಬೇರೆ ಬೇರೆ ಹಿಂದುಳಿದ ಗ್ರಾಮಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದಿಂದ ಗ್ರಾಮಗಳನ್ನು ಅಭಿವೃದ್ಧಿಗಾಗಿ ಮತ್ತು ಕೆಲವು ಗ್ರಾಮಗಳಲ್ಲಿ ಕಡುಬಡವರಿಗೆ ಧೀನ ದಲಿತರಿಗೆ ಮಾಹಿತಿ ಇಲ್ಲದ ಅನಕ್ಷರಸ್ತರಿಗೆ ಫಲಾನುಭವಿಗೆ ನೀಡಲು ಇಂತಹಾ ಗ್ರಾಮಗಳ ಆದರ್ಶವಾಗಿರುತ್ತದೆ. ಮತ್ತು ಗ್ರಾಮಗಳ ಸ್ವಚ್ಚತೆಯನ್ನು ಕಾಪಾಡಲು ಇಂತಹ ಆದರ್ಶ ಗ್ರಾಮಗಳು ಸಹಾಯವಾಗುತ್ತದೆ.


NARASINGAPURA GRAMAPANCHAYATH
VILLAGE WISE LANDUSE MAP IN SANDUR TALUK
(MP ADARSHA GRAMA)
Suseelnagar GP
Bhujanganagar GP
Taranagar GP
Antapur GP
Rajapura GP
Yerriahanahalli GP
NARASINGAPUR
VITTALNAGAR
Sandur Taluk
INDEX
MP_AG_Narsingpura_GP_Landuse by DISCR_L3
Barren Rocky / Stony Waste / Sheet Rock (19)
Forest Plantations (2)
Kharif + Rabi (Double Crop) (5)
Kharif crop (5)
Lake / Tanks (3)
Land with scrub (2)
Mining / Industrial Wasteland (12)
Scrub Forest (4)
Village (2)
Village Locations
Village Bnd
Narasingapur GP Bnd
Narsingpura GP Roads network
Metalled Roads
Unmetalled roads
State Highway
Drainage Line
MP AG Narsingpura GP Wshd Bnd
Narihalla Reserviour
Narasingapura Grama Ppanchayath
Demographic Information
AS PER 2011 CENSUS
TOTAL POPPULATION : 11447
MAIL POP : 5908
FEMAIL POP : 5539
TOTAL SC POP : 2274
SC MAIL : 1147
SC FEMAIL : 1127
TOTAL ST POP : 3253
ST MAIL : 1651
ST FMAIL : 1602
0 2 4
kilometers
Prepared For Devolopment Section ZP(MP Adarsha Grama)
Prepared By
District NRDMS Centre
ZP, Bellary
Head Office
Karnataka State Council for Science and Technology (KSCST)
IISc, Bangalore-12


NARASINGAPURA GRAMAPANCHAYATH
VILLAGE WISE WATERSHED MAP IN SANDUR TALUK
(MP ADARSHA GRAMA)
Suseelnagar GP
Bhujanganagar GP
Taranagar GP
Antapur GP
Rajapura GP
Yerriahanahalli GP
Taluru
Banihatti
Mararipur
Vittalnagar
Antapur
Ubbalagandi
Rajapur
NARASINGAPUR
VITTALNAGAR
Sandur Taluk
INDEX
Narsingpura_GP_Wshd by MINIWSHED
Antapur (2)
Banihatti (6)
Mararipur (2)
Rajapur (1)
Taluru (1)
Ubbalagandi (5)
Vittalnagar (10)
Village Locations
Village Bnd
Narasingapur GP Bnd
Narsingpura GP Roads network
Metalled Roads
Unmetalled roads
State Highway
Drainage Line
MP AG Narsingpura GP Wshd Bnd
Narihalla Reserviour
Narasingapura Grama Ppanchayath
Demographic Information
AS PER 2011 CENSUS
TOTAL POPPULATION : 11447
MAIL POP : 5908
FEMAIL POP : 5539
TOTAL SC POP : 2274
SC MAIL : 1147
SC FEMAIL : 1127
TOTAL ST POP : 3253
ST MAIL : 1651
ST FMAIL : 1602
0 2 4
kilometers
Prepared For Devolopment Section ZP(MP Adarsha Grama)
Prepared By
District NRDMS Centre
ZP, Bellary
Head Office
Karnataka State Council for Science and Technology (KSCST)
IISc, Bangalore-12

# ನೀರಿನ ಶುದ್ಧಿಕರಣ ಘಟಕಗಳ ನಿರ್ಮಾಣದಲ್ಲಿ ಜಿ.ಐ.ಎಸ್ ತಂತ್ರಜಾÐ£À

**ಮಹೇಶ್ ರೆಡ್ಡಿ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಬೀದರ್**

**ಹಿನ್ನೆಲೆ**

ನೀರಿನ ಶುದ್ಧಿಕರಣ ಘಟಕವು ಅನಪೇಕ್ಷಿತ ರಾಸಾಯನಿಕ , ಜೈವಿಕ, ಮಾಲಿನ್ಯಕರಿಕಗಳು, ನೀರಲ್ಲಿರುವ ಅನಿಲಗಳನ್ನು ತೆಗೆಯುವ ಪ್ರಕ್ರಿಯವಾಗಿದೆ. ನೀರಿನ ಶುದ್ಧಿಕರಣ ಘಟಕದ ನಿರ್ಧಿಷ್ಟ ಉದ್ದೇಶವೆಂದರೆ, ಮಾನವ ಬಳಕೆಗಾಗಿ ಶುದ್ಧ ಕುಡಿಯುವ ನೀರು ಒದಗಿಸುವುದು.

ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದ್ದು ಅವುಗಳ ಸ್ಥಿತಿಗತಿಗಳನ್ನು ತಿಳಿಯಲು ಹಿರಿಯ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಅಧಿಕಾರಿಗಳು, ನೀರಿನ ಶುದ್ಧಿಕರಣ ಘಟಕಗಳನ್ನು 3 ವರ್ಗಗಳಲ್ಲಿ ವಿಂಗಡಿಸಲು ಸೂಚಿಸಿರುತ್ತಾರೆ.

- ಕರ್ನಾಟಕ ರೂರಲ್ ಇನ್ಫ್ರಾ ಸ್ಟ್ರಕ್ಚರ್ ಡೆವಲೆಪ್‌ಮೆಂಟ್ ನೀರಿನ ಶುದ್ಧಿಕರಣ ಘಟಕಗಳು
- ಜಿಲ್ಲಾ ಪಂಚಾಯತ್ ವತಿಯಿಂದ ತಯಾರಿಸಲಾದ ಕೆಲಸ ನಿರ್ವಹಿಸುತ್ತಿರುವ ನೀರಿನ ಶುದ್ಧಿಕರಣ ಘಟಕಗಳು
- ಜಿಲ್ಲಾ ಪಂಚಾಯತ್ ವತಿಯಿಂದ ತಯಾರಿಸಲಾದ ನಿರ್ಮಾಣ ಹಂತದಲ್ಲಿರುವ ಶುದ್ಧಿಕರಣ ಘಟಕಗಳು

**ಕಾರ್ಯವಿಧಾನ**

- ಬೀದರ್ ಜಿಲ್ಲೆಯ 186 ಗ್ರಾಮ ಪಂಚಾಯತ್‌ಗಳ ನೀರಿನ ಶುದ್ಧಿಕರಣ ಘಟಕಗಳ ದತ್ತಾಂಶವನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಶಾಖೆ ಜಿಲ್ಲಾ ಪಂಚಾಯತ್‌ರವರಿಂದ ಪಡೆದುಕೊಂಡಿರುತ್ತವೆ. ನಂತರ ಕಿರಿಯ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯರವರು NRDMS ಸಂಯೋಜಕರೊಂದಿಗೆ ಕುಳಿತುಕೊಂಡು ನೀರಿನ ಶುದ್ಧಿಕರಣ ಘಟಕಗಳ ಸ್ಥಳವನ್ನು GIS ನ ಸಹಾಯದಿಂದ ತಾಲ್ಲೂಕುವಾರು ನೀರಿನ ಶುದ್ಧಿಕರಣ ಘಟಕಗಳನ್ನು 3 ವಿಧಗಳಾಗಿ ವರ್ಗೀಕರಿಸಿದ್ದಾರೆ.

**ಉಪಯೋಗಗಳು**

- ನಿರ್ಮಾಣ ಹಂತದಲ್ಲಿರುವ ನೀರಿನ ಶುದ್ಧಿಕರಣ ಘಟಕಗಳನ್ನು ತ್ವರಿತ ಕಾರ್ಯರೂಪಕ್ಕೆ ತರಲು ಅನುಕೂಲವಾಗಿರುತ್ತದೆಯೆಂದು ತಿಳಿಸಿರುತ್ತಾರೆ.
- ನೀರಿನ ಶುದ್ಧಿಕರಣ ಘಟಕವಿಲ್ಲದ ಸ್ಥಳಗಳನ್ನು ಗುರುತಿಸಲು ಸಹಾಯವಾಗಿತ್ತದೆ.
- ನೀರಿನ ಶುದ್ಧಿಕರಣ ಘಟಕಗಳನ್ನು ಯಾವ ಶಾಖೆಗೆ ಸೇರಿದೆ ಎಂದು ತಿಳಿಯಲು ಅನುಕೂಲವಾಗಿತ್ತದೆ.


AURAD TALUK
WATER PURIFYING PLANT
STATUS (WPP)
77°9'0"E
77°20'35"E
77°32'10"E
18°23'15"N
18°13'30"N
18°3'45"N
MAP LEGEND
Village boundary (152)
CENSUS_VILLAGE_SETTLEMENTS
GP_HEAD_QUARTERS
KRIDL WPP (4)
RWS Working WWP (23)
RWS Underconstruction WPP (16)
TP
TALUK
Kilometers
0 1.5 3 6 9 12
Source: Rural Drinking&Water Supply Division
Zilla Panchayath Bidar
Prepared By: N.R.D.M.S Bidar

# ಸಮಾಜ ಕಲ್ಯಾಣ ಇಲಾಖೆಗೆ ಜಿ.ಐ.ಎಸ್ ನ ಉಪಯೋಗಗಳು

**ಮಂಜುಳ ಆರ್ ಚಂದಗೋಲ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಚಿಕ್ಕಬಳ್ಳಾಪುರ**

**ಉದ್ದೇಶ**

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಇಲ್ಲಿ ನಡೆದ ಸಭೆಯ ಉದ್ದೇಶದ ಮೇರೆಗೆ Link Document ನಲ್ಲಿ ಹಣ ಬಿಡುಗಡೆಗೊಂಡಿದ್ದು, ಹೊಸದಾಗಿ ಮೋರಾರ್ಜಿ ದೇಸಾಯಿ ಶಾಲೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಸಿಯಲ್ ಶಾಲೆಗಳ ನಿರ್ಮಾಣ ಮಾಡುವ ಉದ್ದೇಶವಾಗಿರುತ್ತದೆ. ಶಾಲೆಗಳ GPS points ಮಾಹಿತಿಗಳು ಲಭ್ಯವಿದ್ದು ಅವುಗಳ ಸ್ಥಳಗಳನ್ನು NRDMSನ ಮೂಲಕ GIS ತಂತ್ರಜ್ಞಾನ ಉಪಯೋಗಿಸಿಕೊಂಡು ರೆಸಿಡೆನ್ಸಿಯಲ್ ಶಾಲೆಗಳ ಮ್ಯಾಪಿಂಗ್ ಮಾಡಿಕೊಡುವ ಉದ್ದೇಶವಾಗಿರುತ್ತದೆ.

**ವಿಧಾನ**

ಸಮಾಜ ಕಲ್ಯಾಣ ಇಲಾಖೆಯಿಂದ ಅಕ್ಷಾಂಶ ಮತ್ತು ರೇಖಾಂಶಗಳ ಮಾಹಿತಿಗಳನ್ನು ಪಡೆದು MapInfo Professional9.0 ಸಾಫ್ಟ್‌ವೇರ್ ಸಹಾಯದಿಂದ ಡಾಟಾಬೇಸ್‌ನಲ್ಲಿ ಇಂದೀಕರಿಸಿ ರೆಸಿಡೆನ್ಸಿಯಲ್ ಶಾಲೆಗಳನ್ನು ತೋರಿಸುವ ಸ್ಥಳಗಳ ನಕ್ಷೆಯನ್ನು ಮಾಡಿಕೊಡಲಾಯಿತು.

ಹೀಗೆ ತಯಾರಾದ ನಕ್ಷೆಯನ್ನು ಸಮಾಜ ಕಲ್ಯಾಣ ಕಚೇರಿಗೆ ನೀಡಲಾಯಿತು.

**ಅಂಕಿ ಅಂಶಗಳ ಅವಶ್ಯಕತೆ**

- ಅಕ್ಷಾಂಶ ರೇಖಾಂಶವಾರು ಮಾಹಿತಿಗಳ ಅವಶ್ಯಕತೆ.
- ಹೊಸ ಮೋರಾರ್ಜಿ ದೇಸಾಯಿ ಶಾಲೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ ಶಿಯಲ್ ಶಾಲೆಗಳ ಮಾಹಿತಿಯ ಅವಶ್ಯಕತೆ.

**ಬಳಕೆದಾರನ ಅವಶ್ಯಕತೆ**

- ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಮೋರಾರ್ಜಿ ದೇಸಾಯಿ ಶಾಲೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಶಿಯಲ್ ಶಾಲೆಗಳ ಅಭಾವವಿರುವುದರಿಂದ ಕೆಲ ತಾಲ್ಲೂಕುಗಳಲ್ಲಿ ಶಾಲೆಗಳನ್ನು ನಿರ್ಮಿಸಲು ಸರ್ಕಾರದಿಂದ ಹಣ ಬಿಡುಗಡೆಯಾಗಿದ್ದು ಸ್ಥಳಗಳನ್ನು ಸೂಚಿಸಲು ನಕ್ಷೆ ಮೂಲಕ ಮಾಹಿತಿ ತಿಳಿದುಕೊಳ್ಳಲು ಅಧಿಕಾರಿಗಳಿಗೆ ಸಹಾಯವಾಗಿರುತ್ತದೆ.
- ನಕ್ಷೆಗಳ ಮೂಲಕ ಶಾಲೆಗಳನ್ನು ಗುರುತಿಸಲು ಸಹಾಯವಾಗಿರುತ್ತದೆ.

**GIS ನಕ್ಷೆಯ ಉಪಯೋಗ**

ನಕ್ಷೆಗಳ ಮೂಲಕ ಶಾಲೆಗಳನ್ನು ಗುರುತಿಸಲು ಸಹಾಯವಾಗಿರುತ್ತದೆ. ಆದುದರಿಂದ ಸದರಿ GIS ನಕ್ಷೆಗಳನ್ನು ಉಪಯೋಗಿಸಿರುತ್ತಾರೆ. ಹಾಗೂ ಸಂಬಂಧಪಟ್ಟ ಸಮಾಜ ಕಲ್ಯಾಣ ಇಲಾಖೆಗೆ ಹಾರ್ಡ್‌ಕಾಪಿ ಮತ್ತು ಸಾಫ್ಟ್ ಪ್ರತಿಯನ್ನು NRDMS ಕೇಂದ್ರವು ಒದಗಿಸಿರುತ್ತದೆ.



# ಓ ಡಿ ಹೆಫ್ ಯೋಜನೆಗೆ ಜಿ.ಐ.ಎಸ್ ನ ಉಪಯೋಗಗಳು

**ಮಂಜುಳ ಆರ್ ಚಂದಗೋಲ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಚಿಕ್ಕಬಳ್ಳಾಪುರ**

**ಉದ್ದೇಶ**

ಜಿಲ್ಲಾ ಪಂಚಾಯತಿಯಲ್ಲಿ ಉಪಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಉದ್ದೇಶದ ಮೇರೆಗೆ ಜಿಲ್ಲೆಯನ್ನು ಸಂಪೂರ್ಣವಾಗಿ ODF (ಬಯಲು ಬಹಿರ್ದೆಸೆ ಮುಕ್ತ) ಮುಕ್ತ ಗ್ರಾಮವನ್ನಾಗಿ ಮಾಡುವ ಉದ್ದೇಶವಾಗಿರುತ್ತದೆ. ಗ್ರಾಮ ಪಂಚಾಯತಿಗಳಿಂದ ಮಾಹಿತಿಗಳ ಲಭ್ಯವಿದ್ದು ಅವುಗಳ ಸ್ಥಳಗಳನ್ನು NRDMSನ ಮೂಲಕ GIS ತಂತ್ರಜ್ಞಾನ ಉಪಯೋಗಿಸಿಕೊಂಡು ODF ಮುಕ್ತ ಗ್ರಾಮಗಳನ್ನು ಮ್ಯಾಪಿಂಗ್ ಮಾಡಿಕೊಡುವ ಉದ್ದೇಶವಾಗಿರುತ್ತದೆ.

**ವಿಧಾನ**

ಜಿಲ್ಲಾ ಪಂಚಾಯತಿಯ ಸಂಬಂಧಪಟ್ಟ ಕೇಂದ್ರದಿಂದ ಮಾಹಿತಿಯನ್ನು ಪಡೆದು MapInfo Professional 9.0 ಸಾಫ್ಟ್‌ವೇರ್ ಸಹಾಯದಿಂದ ಡಾಟಾಬೇಸ್‌ನಲ್ಲಿ ಇಂದೀಕರಿಸಿ ODF ಮುಕ್ತ ಗ್ರಾಮಗಳು ಹಾಗೂ ಇನ್ನೂ ODF ಮುಕ್ತ ಗ್ರಾಮಗಳನ್ನು ಮಾಡಬೇಕಾದ ಸ್ಥಳಗಳನ್ನು ತೋರಿಸುವ ನಕ್ಷೆಯನ್ನು ಮಾಡಿಕೊಡಲಾಯಿತು.

ಹೀಗೆ ತಯಾರಾದ ನಕ್ಷೆಯನ್ನು ಜಿಲ್ಲಾ ಪಂಚಾಯತಿ ಕಚೇರಿಗೆ ನೀಡಲಾಯಿತು.

**ಅಂಕಿ ಅಂಶಗಳ ಅವಶ್ಯಕತೆ**

ಗ್ರಾಮ ಪಂಚಾಯತಿವಾರು ಮತ್ತು ಹಳ್ಳಿಗಳ ಮಾಹಿತಿಗಳ ಅವಶ್ಯಕತೆ.

**ಬಳಕೆದಾರನ ಅವಶ್ಯಕತೆ**

- ಜಿಲ್ಲೆಯ ಎಲ್ಲಾ ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ಮಾಡುವುದು ಸರ್ಕಾರದ ಮಹತ್ವದ ಉದ್ದೇಶವಾಗಿರುವುದರಿಂದ ಅಂತಹ ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಎಂದು ಘೋಷಿಸಿ ಅಂತಹ ಗ್ರಾಮಕ್ಕೆ ಪುರಸ್ಕಾರ ನೀಡುವ ಗುರಿ ಸರ್ಕಾರ ಹೊಂದಿದೆ. ಆದುದರಿಂದ ನಕ್ಷೆಗಳ ಮೂಲಕ ಸ್ಥಳಗಳನ್ನು ಸೂಚಿಸಲು ಮಾಹಿತಿ ತಿಳಿದುಕೊಳ್ಳಲು ಅಧಿಕಾರಿಗಳಿಗೆ ಸಹಾಯವಾಗಿರುತ್ತದೆ.

**GIS ನಕ್ಷೆಯ ಉಪಯೋಗ**

ನಕ್ಷೆಗಳ ಮೂಲಕ ಓಡಿಎಫ್ ಮುಕ್ತ ಗ್ರಾಮ ಗುರುತಿಸಲು ಸಹಾಯವಾಗಿರುತ್ತದೆ. ಆದುದರಿಂದ ಸದರಿ GIS ನಕ್ಷೆಗಳನ್ನು ಉಪಯೋಗಿಸಿರುತ್ತಾರೆ. ಹಾಗೂ ಸಂಬಂಧಪಟ್ಟ ಇಲಾಖೆಗೆ ಹಾರ್ಡ್‌ಕಾಪಿ ಮತ್ತು ಸಾಫ್ಟ್ ಪ್ರತಿಯನ್ನು NRDMS ಕೇಂದ್ರವು ಒದಗಿಸಿರುತ್ತದೆ.



SWATCH BHARATH MISSION,ZILLA PANCHAYATH,CHICKBALLAPUR
CHICKBALLAPUR TALUK
N
KAMMAGUTTAHALLI
MANDIKAL
PERESANDRA
AROOR
GOLLAHALLI
DIBBUR
AVALAGURKI
HAROBANDE
THIPPENAHALLI
MANCHANABELE
ANGAREKANAHALLI
POSHETTIHALLI
PATRENAHALLI
Chikballapur (CMC)
AJJAVARA
MADHURENAHALLI
AGALAGURKI
NANDI
KONDENAHALLI
DODDAMARALI
0 4 8
kilometres
LEGEND
Railway line
NH Road line
SH Roadline
Village Boundary
Complete Open Defecation Free Village
Towards Open Defication Free Village
CMC
Taluk Boundary
MAP PREPARED @ NRDMS CENTRE,ZP,CHICKBALLAPUR

# ಕಾಲೋಚಿತ ನೀರಿನ ಮಟ್ಟ ಏರಿಳಿತದ ಅಧ್ಯಯನಕ್ಕೆ ಜಿ.ಐ.ಎಸ್ ತಂತ್ರಜ್ಞಾನದ ಬಳಕೆ

**ಕಾರ್ತಿಕ್ ಎಂ ಎಸ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಚಾಮರಾಜನಗರ**

**ಪೀಠಿಕೆ**

ಚಾಮರಾಜನಗರ ಜಿಲ್ಲೆಯು ಅತೀ ಹೆಚ್ಚು ನೈಸರ್ಗಿಕ ಸಂಪನ್ಮೂಲಗಳನ್ನು ಒಳಗೊಂಡಿದ್ದು, ಶೇ.47 ರಷ್ಟು ಭೂಭಾಗವು ಅರಣ್ಯ ಪ್ರದೇಶವನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣ ತೀರಾ ಕಡಿಮೆಯಾಗುತ್ತಾ ಬಂದಿದ್ದು, ಕಳೆದ 10 ವರ್ಷಗಳ ವಾಸ್ತವ ಮಳೆಯ ಪ್ರಮಾಣವನ್ನು ಅಭ್ಯಾಸಿಸಿದಾಗ ಮಳೆಯ ಪ್ರಮಾಣದಲ್ಲಿ ಭಾರಿ ಏರಿಳಿತ ಕಂಡುಬರುತ್ತದೆ. ಇದರಿಂದ ಅಂತರ್ಜಲ ಮಟ್ಟದಲ್ಲೂ ಭಾರೀ ಪ್ರಮಾಣದಲ್ಲಿ ಏರಿಳಿತ ಕಂಡುಬಂದಿದ್ದು, ಗಣಿ ಮತ್ತು ಭೂವಿಜ್ಞಾನ ವ್ಯಾಪ್ತಿಗೆ ಬರುವ ವೀಕ್ಷಣಾ ಬಾವಿಗಳ ಸಹಾಯದಿಂದ ಕಾಲೋಚಿತ ಅಂತರ್ಜಲ ಮಟ್ಟದ ಏರಿಳಿತವನ್ನು ಅಧ್ಯಯನ ಮಾಡಲು ಸಹಾಯಕವಾಗುತ್ತದೆ.

**ಉದ್ದೇಶ**

ಚಾಮರಾಜನಗರ ಜಿಲ್ಲೆಯ ಹಿರಿಯ ಭೂವಿಜ್ಞಾನ ಮತ್ತು ಅಂತರ್ಜಲ ಕಛೇರಿ ವ್ಯಾಪ್ತಿಯಲ್ಲಿ ಒಟ್ಟು 38 ವೀಕ್ಷಣಾ ಬಾವಿಗಳಿದ್ದು, ಹಿರಿಯ ಭೂವಿಜ್ಞಾನಿಗಳ ಕೋರಿಕೆಯ ಮೇರೆಗೆ ಜಿಲ್ಲಾ ಎನ್.ಆರ್.ಡಿ.ಎಂ.ಎಸ್ ಕೇಂದ್ರದಿಂದ ಕಾಲೋಚಿತ ಅಂತರ್ಜಲ ನೀರಿನ ಮಟ್ಟದ ಏರಿಳಿತ ನಕ್ಷೆಯನ್ನು ಜಿ.ಐ.ಎಸ್ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ತಯಾರಿಸಲಾಗಿದೆ.

**ವಿಧಾನ**

ಜಿಲ್ಲೆಯ ಹಿರಿಯ ಭೂವಿಜ್ಞಾನ ಮತ್ತು ಅಂತರ್ಜಲ ಕಛೇರಿ ಅಧೀನದಲ್ಲಿ 38 ವೀಕ್ಷಣಾ ಬಾವಿಗಳು ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲೆಯಲ್ಲಿರುವ ಭೂವಿಜ್ಞಾನಿಗಳು ಪ್ರತಿ ತಿಂಗಳು ಅಂತರ್ಜಲ ಮಟ್ಟದ ಏರಿಳಿತವನ್ನು ಅಭ್ಯಾಸಿಸುತ್ತಿದ್ದು, ಭೂವಿಜ್ಞಾನಿಗಳು ನೀಡಿರುವ ಅಂಕಿ-ಅಂಶವನ್ನು ಜಿ.ಐ.ಎಸ್ ತಂತ್ರಜ್ಞಾನದ ಮೂಲಕ ಗಣಕೀಕೃತಗೊಳಿಸಿ ನಕ್ಷೆಯನ್ನು ತಯಾರಿಸಲಾಯಿತು.

ವಿವಿಧ ಇಲಾಖೆಯಿಂದ ಅಂಕಿ-ಅಂಶವನ್ನು ಕಲೆಹಾಕಿದ ವಿವರ

- ಜಿಲ್ಲಾ ಭೂವಿಜ್ಞಾನ ಮತ್ತು ಅಂತರ್ಜಲ ಕಛೇರಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ 38 ವೀಕ್ಷಣಾ ಬಾವಿಗಳ ಕಾಲೋಚಿತ ನೀರಿನ ಮಟ್ಟದ ಏರಿಳಿತ ಅಂಕಿ-ಅಂಶದ ಮಾಹಿತಿಯನ್ನು ಕಲೆಹಾಕಲಾಯಿತು.
- ಜಿಲ್ಲೆಯ ಕೃಷಿ ಇಲಾಖೆಯಿಂದ ವಾರ್ಷಿಕ ಹಾಗೂ ವಾಡಿಕೆಯ ಸರಾಸರಿ ಮಳೆಯ ಮಾಹಿತಿಯನ್ನು ಕಲೆಹಾಕಲಾಯಿತು.

**ಬಳಕೆದಾರರ ಅವಶ್ಯಕತೆ**

- ನಕ್ಷೆಗಳ ಸಹಾಯದಿಂದ ಜಿಲ್ಲೆಯಲ್ಲಿ ಕಂಡುಬರುವ ಕಾಲೋಚಿತ ನೀರಿನ ಮಟ್ಟದ ಏರಿಳಿತವನ್ನು ಕರಾರುವಕ್ಕಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಕಾಲೋಚಿತ ನೀರಿನ ಮಟ್ಟದ ಏರಿಳಿತ ನಕ್ಷೆಯ ಸಹಾಯದಿಂದ ಅಂತರ್ಜಲ ಮಟ್ಟ ಇಳಿಕೆಯಾಗಿರುವ ಪ್ರದೇಶದಲ್ಲಿ ಅಂತರ್ಜಲ ಮಟ್ಟವನ್ನು ಸುಧಾರಿಸಲು ಜಲಾನಯನ ಅಭಿವೃದ್ಧಿ, ನೆಡುತೋಪು ಯೋಜನೆ, ಕೃಷಿಹೊಂಡ ಯೋಜನೆ, ಭೂಮೇಲ್ಮೈ ಜಲ ಇಂಗುವಿಕೆಯ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯಕವಾಗುತ್ತದೆ.


CHAMARAJANAGAR DISTRICT
WATER LEVEL FLUCTUATION
MANDYA DISTRICT
RAMANAGAR DISTRICT
MYSORE DISTRICT
TAMIL NADU STATE
TAMIL NADU STATE
TAMIL NADU STATE
N
0 4.75 9.5 19 28.5 38
Kilometers
11°51'0"N
77°15'0"E
Legend
OBSERVATION WELLS
TALUK BOUNDARY
DISTRICT BOUNDARY
VILLAGE BOUNDARY
DISTRICT FOREST
FLUCTUATION VALUE
31.49 - 91.30
91.30 - 151.11
151.11 - 210.92
210.92- 270.73
270.73 - 330.54
PREPARED AT :
KSCST
DISTRICT NRDMS CENTRE
ZILLA PANCHAYATH ,CHAMARAJANAGAR
SOURCE :MINES AND GEOLOGY DEPARTMENT ,CHAMARAJANAGAR



CHAMARAJANAGAR DISTRICT
WATER SHED
MANDYA DISTRICT
RAMANAGAR DISTRICT
MYSORE DISTRICT
TAMIL NADU STATE
TAMIL NADU STATE
TAMIL NADU STATE
N
0 4.75 9.5 19 28.5 38
Kilometers
11°51'0"N
77°15'0"E
Legend
TALUK BOUNDARY
DISTRICT BOUNDARY
VILLAGE BOUNDARY
WATER SHEED BOUNDARY
WATER SHEED ID
4B2D3d
4B3A1a
4B3A1b
4B3A1c
4B3A2a
4B3A2b
4B3A3a
4B3A3b
4B3A3c
4B3A4a
4B3A4b
4B3A4c
4B3A5a
4B3A5b
4B3A5c
4B3A5d
4B3A6a
4B3A6b
4B3C1a
4B3C1b
4B3C6b
4B3E1a
4B3E1b
4B3E1c
4B3E2a
4B3E2b
4B3E2c
4B3E2d
4B3E5b
4B3E5c

## ಹಕ್ಕು ಪತ್ರಗಳನ್ನು ವಿತರಿಸುವಲ್ಲಿ ಜಿ.ಐ.ಎಸ್ ನ ಉಪಯೋಗಗಳು

**ಓಂಕಾರ್ ಕೋರಿ, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಗದಗ್**

**ಉದ್ದೇಶ**

F.R.A (Forest Reservation Act) ಅನ್ವಯ ಗದಗ ಜಿಲ್ಲೆಯಲ್ಲಿ ಹಕ್ಕು ಪತ್ರಗಳನ್ನು ವಿತರಿಸಲಾಗಿತ್ತು. ಈ ಅಧಿನಿಯಮದಡಿ ಹಕ್ಕು ಪತ್ರಗಳನ್ನು ಪಡೆದವರ ಸ್ಥಾನಗಳನ್ನು G.P.S ಹಾಗೂ G.I.S ತಂತ್ರಾಂಶದ ಮೂಲಕ ಗುರುತಿಸಿ ಅಕ್ಷಾಂಶ ಮತ್ತು ರೇಖಾಂಶಗಳನ್ನು ನಕ್ಷೆಯನ್ನು ತಯಾರಿಸಲು ಮಾನ್ಯ ಜಿಲ್ಲಾಧಿಕಾರಿಗಳು ಗದಗ ಜಿಲ್ಲೆ ಇವರು NRDMS ಗೆ ನಿರ್ದೇಶನ ನೀಡಿದ್ದರು.

**ವಿಧಾನ**

ಗದಗ ಜಿಲ್ಲೆಯ ಗದಗ ತಾಲೂಕಿನ ಕಬಲಾಯತಕಟ್ಟಿ ಗ್ರಾಮದಲ್ಲಿ ಇವರು ಅರಣ್ಯ ಪ್ರದೇಶದ ಸರ್ವೆನಂಬರ್ ನಾಲ್ಕರಲ್ಲಿ ಹಕ್ಕು ಪತ್ರ ನೀಡಲಾಗಿತ್ತು. ಈ ಪ್ರದೇಶವನ್ನು ಸ್ಯಾಟಲೈಟ್ ನಕ್ಷೆ, ಗ್ರಾಮ ಸರ್ವೆ ನಂಬರ್ ನಕ್ಷೆ. G.I.S ತಂತ್ರಾಂಶವನ್ನು ಬಳಸಿಕೊಂಡು "Georeference" ಮಾಡಿ ಸರ್ವೆ ನಂಬರ್ ನಾಲ್ಕರಲ್ಲಿ ಹಕ್ಕು ಪತ್ರ ನೀಡಿರುವ ಪ್ರದೇಶವನ್ನು, GPS ತಂತ್ರಾಂಶವನ್ನು ಬಳಸಿಕೊಂಡು ವಿಸ್ತೀರ್ಣವನ್ನು ಕಂಡುಹಿಡಿದು ನಕ್ಷೆಯನ್ನು ತಯಾರಿಸಲಾಗಿದೆ.

**ಅಂಕಿ ಅಂಶಗಳ ಅವಶ್ಯಕತೆ**

- ಅರಣ್ಯ ಇಲಾಖೆಯಿಂದ F.R.A Act ಅನ್ವಯ ಹಕ್ಕು ಪತ್ರವನ್ನು ವಿತರಿಸಿದ ಫಲಾನುಭವಿಗಳ ಪಟ್ಟಿಯನ್ನು ಪಡೆಯಲಾಯಿತು.
- ಕಬಲಾಯತಕಟ್ಟಿ ಗ್ರಾಮದ ಸರ್ವೆನಂಬರ್ ನಾಲ್ಕು (ಅರಣ್ಯ ಪ್ರದೇಶ) ಸಂಬಂಧಿಸಿದ ಮಾಹಿತಿಯನ್ನು ಪಡೆಯಲಾಯಿತು.

**ಬಳಕೆದಾರನ ಅವಶ್ಯಕತೆ**

ಈ ನಕ್ಷೆಯಲ್ಲಿ ತಿಳಿಸಿರುವಂತೆ, ಅರಣ್ಯ ಪ್ರದೇಶದ ಯಾವ ಸರ್ವೆನಂಬರ್ನಲ್ಲಿ ಯಾವ ಭಾಗವನ್ನು ಹಕ್ಕು ಪತ್ರದ ಮೂಲಕ ವಿತರಿಸಲಾಗಿದೆ ಹಾಗೂ ಎಷ್ಟು ಪ್ರದೇಶವನ್ನು ನೀಡಲಾಗಿದೆ ಎಂಬುದು ನಕ್ಷೆಯ ಮೂಲಕ ತೋರಿಸುವುದು. ತುಂಬಾ ಅವಶ್ಯಕವಾಗಿತ್ತು. ಆದ್ದರಿಂದ G.P.S ಹಾಗೂ G.I.S ತಂತ್ರಾಂಶವನ್ನು ಬಳಸಿಕೊಂಡು ನಕ್ಷೆಯನ್ನು ತಯಾರಿಸಲಾಗಿದೆ.

**ಉಪಯುಕ್ತತೆ**

- ಹಕ್ಕು ಪತ್ರವನ್ನು ಅರಣ್ಯ ಪ್ರದೇಶದ ಯಾವ ಭಾಗದಲ್ಲಿ ಹಾಗೂ ಎಷ್ಟು ಪ್ರದೇಶವನ್ನು F.R.A Act ಅನ್ವಯ ನೀಡಲಾಗಿದೆ ಎಂಬುದನ್ನು ನಕ್ಷೆಯಮೂಲಕ ತಿಳಿದುಕೊಳ್ಳಲು ಸುಲಭ ಸಾಧ್ಯವಾಗುತ್ತದೆ.
- ಈ ನಕ್ಷೆಯನ್ನು ಉಪಯೋಗಿಸಿಕೊಂಡು ಮುಂದೆ ಆಗುವ ಅರಣ್ಯ ಒತ್ತುವರಿಯನ್ನು ತಡೆಗಟ್ಟಲು ಅನೂಕೂಲವಾಗುತ್ತದೆ.


F.R.A Map of Kabalaythkatti village
N
S
W
E
2/A1
2/A2
2/A3
2/A4
2/A5
2/A6
2/A
2/E
2/B
55 /A1
STREAM
1
3
4
5
6
56
1/A
Image © 2017 DigitalGlobe
Latitude Longitude
1) 15°18'6.07"N 75°38'42.09"E
2) 15°18'7.14"N 75°38'41.81"E
3) 15°18'6.17"N 75°38'40.64"E
4) 15°18'6.93"N 75°38'40.26"E
5) 15°18'8.89"N 75°38'44.29"E
6) 15°18'7.32"N 75°38'44.85"E
SCALE 1:4,500
0 0.05 0.1 0.2 0.3 0.4
Kilometers
Legend
F.R.A LAND 1.26 Acres
Survey Number

# ಕಾಡ್ಗಿಚ್ಚು ನಿಯಂತ್ರಣ ಯೋಜನೆ ರೂಪಿಸುವಲ್ಲಿ ಜಿ.ಐ.ಎಸ್ ತಂತ್ರಾಂಶದ ಬಳಕೆ

**ಕೆ ಕಿರಣ್ ರಾಜ್, ಎನ್.ಆರ್.ಡಿ.ಎಂ.ಎಸ್. ಕೇಂದ್ರ, ಕೊಡಗು**

**ಉದ್ದೇಶ**

ಕಾಡ್ಗಿಚ್ಚು ಒಂದು ಪ್ರಕೃತಿ ವಿಕೋಪ. ಬರದ ತೀವ್ರತೆ ಹೆಚ್ಚಿದ್ದು, ಬೇಸಿಗೆಯಲ್ಲಿ ಕಾಡ್ಗಿಚ್ಚು ನಿಯಂತ್ರಣ ಯೋಜನೆ ರೂಪಿಸಲು ಅರಣ್ಯ ಇಲಾಖೆಯು ಮುಂದಾಗಿದ್ದು ಕಳೆದ ಐದು ವರ್ಷಗಳಲ್ಲಿ ಸಂಭವಿಸಿದ ಕಾಡ್ಗಿಚ್ಚು ಪ್ರದೇಶಗಳನ್ನು ತೋರಿಸುವ ನಕಾಶೆಯನ್ನು ತಯಾರಿಸಲು ಜಿಲ್ಲಾ NRDMS ಕೇಂದ್ರಕ್ಕೆ ಅರಣ್ಯ ಇಲಾಖಾಧಿಕಾರಿಗಳ ಕೋರಿಕೆ ಮೇರೆಗೆ GIS ತಂತ್ರಾಂಶವನ್ನು ಬಳಸಿ ನಕಾಶೆಯನ್ನು ತಯಾರಿಸಲಾಯಿತು.

ದಟ್ಟ ಅರಣ್ಯ, ಬಿರು ಬೇಸಿಗೆಗೆ ಬೀಸುವ ಗಾಳಿ ಹೊಡೆತಕ್ಕೆ ಮರಗಳು ಒಂದಕ್ಕೊಂದು ತಿಕ್ಕಿ ಅಥವಾ ಪ್ರಾಣಿಗಳ ಓಟಕ್ಕೆ ಸಿಕ್ಕ ಕಲ್ಲುಗಳು ಒಂದಕೊಂದು ತಿಕ್ಕಿ ಕಿಡಿ ಹತ್ತಿ ಕಾಡ್ಗಿಚ್ಚಿಗೆ ಕಾರಣವಾಗ ಬಹುದು ಇಲ್ಲವೇ ಮನುಷ್ಯರ ತಪ್ಪುಗಳಿಂದ ಹತ್ತಿಯುರಿವುದೇ ಜಾಸ್ತಿ. ಇದೆಲ್ಲವನ್ನು ನಿಯಂತ್ರಿಸುವ ಉದ್ದೇಶದಿಂದ ಕಾಡ್ಗಿಚು ನಿಯಂತ್ರಣ ಯೋಜನೆ ರೂಪಿಸಬೇಕಾಗಿದೆ.

**ಅಂಕಿ ಅಂಶಗಳು ಮತ್ತು ವಿಧಾನ**

ಸರ್ವೆ ಆಫ್ ಇಂಡಿಯಾದ 1:50000 ಸ್ಕೇಲ್ ಆಧಾರಿತ ಟೋಪೋಶೀಟ್‌ಗಳನ್ನಾದರಿಸಿ ತಯಾರಿಸಲಾದ ಜಿಲ್ಲಾ ಗಡಿ, ತಾಲ್ಲೂಕು ಗಡಿ ಮತ್ತು ಭೂ ಬಳಕೆ (land use /land cover) ಪದರವನ್ನು ಬಳಸಲಾಯಿತು. ಕಳೆದ ಐದು ವರ್ಷಗಳಲ್ಲಿ ಸಂಭವಿಸಿದ ಕಾಡ್ಗಿಚ್ಚು ಪ್ರದೇಶಗಳ GPS ಮಾಹಿತಿಯನ್ನು ಅರಣ್ಯ ಇಲಾಖೆಯಿಂದ ಪಡೆದು ಕೊಂಡು ಅದನ್ನು ಗಣಕೀಕೃತಗೊಳಿಸಿ ArcGIS ತಂತ್ರಾಂಶವನ್ನು ಬಳಸಿ ಎಲ್ಲಾ ಪದರಗಳನ್ನು ಓವರ್ಲೇ ಮಾಡಿ ನಕಾಶೆಯನ್ನು ತಯಾರಿಸಲಾಯಿತು.

**ಬಳಕೆದಾರನ ಅವಶ್ಯಕತೆ**

- ಪ್ರಸ್ತುತ ಸಾಲಿನಲ್ಲಿ ಬರದ ತೀವ್ರತೆ ಹೆಚ್ಚಿದ್ದು ಬೇಸಿಗೆಯಲ್ಲಿ ಕಾಡ್ಗಿಚ್ಚು ನಿಯಂತ್ರಣಕ್ಕೆ ಇಲಾಖೆ ಕಾರ್ಯೋನ್ಮುಕವಾಗಬೇಕಿದೆ
- ನಕಾಶೆಯಲ್ಲಿ ತೋರಿಸಿರುವಂತೆ ಆನೆಕಾಡು, ಮಾಲ್ದಾರೆ ಮತ್ತು ದೇವಮಾಚಿ ಪ್ರದೇಶಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಕಾಡ್ಗಿಚ್ಚು ಹೆಚ್ಚಾಗಿ ಸಂಭವಿಸಿದ್ದು ಆ ಸ್ಥಳಗಳನ್ನು ಸೂಕ್ಷ್ಮ ನಿಗಹಿಡಿದು ಮುಂಜಾಗ್ರತಾ ಕ್ರಮವಹಿಸುವುದು.
- ಕಾಡಂಚಿನ ಜನರಲ್ಲಿ ಅರಣ್ಯ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸುವುದು.
- ಮುಂಜಾಗ್ರತಾ ಕ್ರಮವಾಗಿ ಕೈಗೊಳ್ಳ ಬಹುದಾದ ಮುನ್ನೆಚ್ಚರಿಕೆಯ ಕ್ರಮದ ಕುರಿತು ಬೆಂಕಿ ರೇಖೆ ನಿರ್ಮಾಣ, ಆಯಕಟ್ಟಿನ ಸ್ಥಳಗಳಲ್ಲಿ ನೀರು ಸಂಗ್ರಹಿಸುವುದು, ರಸ್ತೆ ಬದಿಗಳಲ್ಲಿ ಒಣಗಿದ ಹುಲ್ಲುಗಳನ್ನು ತೆರವುಗೊಳಿಸುವುದು ಹಾಗೂ ಬೆಂಕಿ ಬಿದ್ದರೆ ಅಗ್ನಿ ಶಾಮಕ ದಳದ ನೆರವಿನಿಂದ ಆರಿಸುವುದು.



KODAGU DISTRICT
MAP SHOWING RESERVE FOREST
WILD LIFE SANCTUARIES AND
NATIONAL PARK
75°31'20"E
75°41'30"E
75°51'40"E
76°1'50"E
12°51'10"N
12°41'0"N
12°30'50"N
12°20'40"N
12°10'30"N
12°0'20"N
11°50'10"N
N
S
E
W
DAKSHINA KANNADA DISTRICT
HASSAN DISTRICT
MYSORE DISTRICT
KERALA STATE
WAYANAD DISTRICT
Pushpagiri W.L.S
Malambi
Yadavanad
Patti Ghat
Anekad
Maldare
Talacauvery W.L.S
Devamachi
Padinalknad Ghat
Kerti
Bramhagiri W.L.S
Nagarahole R.G.N.P
Legend
District Boundary
Madikeri Division
Virajpet Division
Reserve Forest
R.G.N.P
Wild Life Sanctuaries
River
0
4.5
9
18
Kilometers
Prepared By:
District NRDMS Centre
Kodagu Zilla Panchayath
Madikeri



LOCATION OF FOREST FIRE CASES IN KODAGU CIRCLE
FOR THE YEAR 2011-2016
75°31'20"E
75°41'30"E
75°51'40"E
76°1'50"E
12°51'10"N
12°41'0"N
12°30'50"N
12°20'40"N
12°10'30"N
12°0'20"N
11°50'10"N
N
S
E
W
DAKSHINA KANNADA DISTRICT
HASSAN DISTRICT
MYSORE DISTRICT
KERALA STATE
WAYANAD DISTRICT
Malambi
Pushpagiri
Yadavanad
Forest Paisary
Patti Ghat
Anekad
Maldare
Talacauvery
Forest Paisary
Devamachi
Padinalknad Ghat
Kerti
Bramhagiri
Nagarahole
Legend
LAND USE/LAND COVER
DISCR-L1
Built-up land
Water Bodies
Forest
Agricultural land
Grassland / Grazing land
Wastelands
Others
DISTRICT BOUNDARY
FOREST FIRE
Year
2011
2012
2013
2014
2015
2016
Prepared By:
District NRDMS Centre
